ಸತೀ ಸಾವಿತ್ರಿ

ಅಥವಾ

ಯಮನ ಸೋಲು

ಲೇಖಕ:

ಎ. ಯಸ್. ಅನಂತಕೃಷ್ಣ.

1960.

ಬೆಲೆ: ರೂ. 0-37.

ಪಾತ್ರ ಪರಿಚಯ:

1. ಅಶ್ವಪತಿ . . (ಮದ್ರದೇಶದ ರಾಜ)
2. ಮಾಲವೀ ದೇವಿ . . (,, ರಾಣಿ)
3. ನಾರದ . . .
4. ಸಾವಿತ್ರಿ ದೇವಿ . . (ದೃಶ್ಯ)
5. ದ್ಯುಮತ್ಸೇನ . . (ಸಾಲ್ವ ದೇಶದ ರಾಜ)
6. ಶೈಭ್ಯೆ . . (,, ರಾಣಿ)
7. ಸತ್ಯವಾನ . . (ದ್ಯುಮತ್ಸೇನನ ಮಗ)
8. ವೀರಸಿಂಹ . . (ಮಗಧ ದೇಶದ ರಾಜ)
9. ಮಂತ್ರಿಗಳು . . .
10. ಸಾವಿತ್ರಿ . . (ಅಶ್ವಪತಿಯ ಮಗಳು)
11. ಯಮ.
12. ಯಮ ಭಟರು.
13. ಚಾರಕರು.
14. ಚಿತ್ರಗುಪ್ತರು.

॥ ಹರಿಃ ಓಂ ॥



॥ ಶ್ರೀಗಣಾಧಿಪತಯೇ ನಮಃ ॥

ವೃತ್ತ

ಶ್ರೀದೇವೀ ಭ್ರಮರಾಜಿ ಮೂಲ ಚಿಕುರೇ-ಬ್ರಹ್ಮೋಲ್ಲಸತ್ಪಂಕಜಾ ।
ಶುಭ್ರಾಸ್ಯೆ ಮಧುವಾತ ವಾಹವಿಹರಾ – ತ್ಪತ್ರಾಂಬಿಕೇ ಯೋಗಿನೀ ॥
ಸ್ವಾಂತಶ್ರ್ಯೋಭಿ ಪರಾಪರಾಖ್ಯಮುಕುಲಾ – ಕಾರಸ್ತನೇಸ್ವೋಜ್ಜ್ವಲಾ ।
ಚೈತನ್ಯಾಂಬುಧಿ ಚಾರು ಕಾಲ ಕಮಲಿನ್ಯತ್ರಾಸ್ಮಿ ಪಾದಾನತಃ ॥ ೧ ॥

ನಾಟ – ಝಂಪೆ

ಪರಿಪಾಹಿ ಗಜವದನ । ಪರಿಪೂರ್ಣ ಗುಣಸದನ । ಸರಸಿಜೋದ್ಭವ ನಮಿತ ಖ್ಯಾತ ॥ ಕರುಣನಿಧಿ ಭವದೂರ । ದುರಿತ ವಿಘ್ನಕುಠಾರ । ಗಿರಿಜೆಯಾತ್ಮಜ ಧೀರ ಶೂರ ॥ ೧ ॥ ಶರಣ ಜನ ಸಂರಕ್ಷ । ದುರುಳ ದಾನವ ಶಿಕ್ಷ । ಪರಶಿವನ ಪ್ರಿಯ ಬಾಲಲೋಲ ॥ ನಿರತ ಪೂಜೆಯ ಗೊಂಬ । ಕರಿವದನ ಹೇರಂಬ । ಪೊರೆಯೆನ್ನ ಸನುದಿನದಿ ದಯದಿ ॥ ೨ ॥

ಸುರಟಿ – ಏಕ

ಸರಸತಿ ಮಾಂಪಾಹಿ । ದೇವೀ ॥ ಸರುವೀಪ್ಸಿತ ದೇಹಿ ॥ ತರುಣಿಯೆ ಮಂಗಳ । ಚರಣೆಯೆ ನಿನ್ನಯ । ದರುಶನ ಲಾಭವ । ಕರುಣಿಸು ಜನನಿ ॥

ಸರ ॥ ೧ ॥ ವಿದ್ಯಾನಿಧಿ ವಾಣಿ । ಕರುಣಿಸು । ಬುದ್ಧಿಯ ವಿಧಿರಮಣಿ ॥ ನಿದ್ದೆಯು ಕಣ್ಣನು । ತಿದ್ದುತ ಜ್ಞಾನವ । ಶ್ರದ್ಧೆಯ ನೀಡೌ । ಮುದ್ದು ಕುಮಾರಗೆ ॥ ಸರ ॥ ೨ ॥ ಮತಿದೋರದು ಮಾತೆ । ಜ್ಞಾನದ । ಪಥ ಗಾಣದೆ ಸೋತೆ ॥ ಗತಿ ಯಾವುದು ಸ । ದ್ಗತಿಯನು ಕರುಣಿಸು । ತತಿ ಹಿತದಲಿ ಸರ । ಸ್ವತಿ ನೀ ಪಾಲಿಸು ॥ ಸರ ॥ ೩ ॥

ಭಾಮಿನಿ

ಆದಿಪುರುಷನ ನಮಿಸಿ ತ್ರ್ಯಕ್ಷನ । ಮೋದದಿಂದರ್ಚಿಸುತ ವಾಣೀ । ಕಾದಲಗೆ ಪೊಡಮಟ್ಟು ನವಗ್ರಹರನ್ನು ಪೂಜಿಸುತ ॥ ಆದಿಮಾಯೆಯ ನುತಿಸಿ ಲಕ್ಷ್ಮಿಯ ಪಾದಕೊಂದಿಸಿ ದಿಗಧಿಪರ ನಾ । ರಾಧಿಸುತ ಕವಿ ಜನರ ಕೀರ್ತಿಸಿ ಪೇಳ್ವೆನೀ ಚರಿತ ॥ ೧ ॥

ಇದು ಕಣಾ ಕಾವ್ಯಾರ್ಥವೀವುದು । ಇದು ಕಣಾ ಪಾಪಗಳ ದಹಿಪುದು । ಇದು ಕಣಾ ಸೌಭಾಗ್ಯ ಕೊಡುವುದು ಹೇಳಿ ಕೇಳ್ದರಿಗೆ ॥ ಇದು ಕಣಾ ಹದಿಬದೆಯ ಲಕ್ಷಣ । ಇದು ಕಣಾ ಕುಲ ಸ್ತ್ರೀಯ ಭೂಷಣ । ಇದು ಕಣಾ ಸತಿ ಮಾರ್ಗದರ್ಶನವೆನಿಪ ಗುಣಕಥನ ॥ ೨ ॥

ಸೌರಾಷ್ಟ್ರ - ತ್ರಿವುಡೆ

ತರುಣಿ ಭಾಮಾದೇವಿಗಾ ಸುರು । ಚಿರದ ಸತಿಯರ ಪಾತಿವ್ರತ್ಯದ । ಚರಿತೆಗಳ ಪಾಂಚಾಲಿ ಪೇಳ್ತಿರ । ಲರಿತು ಮನದಿ ॥ ೧ ॥ ಪುಣ್ಯಸಾಗರೆ ನಿನ್ನ ಕಥನದಿ । ಜನ್ಮ ಪಾವನವಾಯ್ತು ನೀನೆನ । ಗಿನ್ನರುಹು ಸಾವಿತ್ರಿ ದೇವಿಯ । ಪುಣ್ಯ ಕಥೆಯ ॥ ೨ ॥ ಮದ್ರ ದೇಶದ ನೃಪತಿ ತಪದಿಂ । ಭದ್ರೆ ಸಾವಿತ್ರಿಯನು ಮೆಚ್ಚಿಸಿ । ಸಿದ್ಧಿಸಿದ ಮೇಲ್ಪಡೆದಳೆಂತೈ ಮುದ್ದು ಸುತೆಯ ॥ ೩ ॥ ಆ ಯುವತಿ ಬಳಿಕೆಂತು ತನ್ನಯ । ನಾಯಕನ ತಾನರುಹಿ ಕೊಂಡಳು । ಆಯು ಹೀನನನೆಂತು ಜೈಮಿನಿ । ರಾಯನೊಡನೆ ॥ ೪ ॥ ಎಂತು ಕೊಟ್ಟನು ಯಮನು ಜೀವವ । ನೆಂತು ಬದುಕಿದ ಸತ್ಯವಾನನು । ಸಂತವಿಸು ನೀನರುಹಿ ಕಥೆಯಾ । ದ್ಯಂತವನ್ನು ॥ ೫ ॥ ಎಂದು ಭಕ್ತಿ ಯೊಳಿರಗೆ ಕಾಣುತ । ಮಂದಗಮನೆಯನೆತ್ತಿ ತಳ್ಕಿಸು । ತೆಂದಳಾ ಭಾಮಿನಿಗೆ ಕರುಣದೊ । ಳಂದು ಕಥೆಯ ॥ ೬ ॥

ಭಾಮಿನಿ

ಧರಣಿಪತಿ ಮಾದ್ರೇಶನೊಂದಿನ । ಭರಿತ ಸಭೆಯೊಳಗಿರಲು ಮಂತ್ರೀ । ಶ್ವರ ಗಡಣ ಜನನಿವಹ ಗಾಯಕ ನೃಂದದೊಡಗೊಂಡು । ಉರುತರದ ಸಂತೋಷದಿಂದಿರೆ । ಧರಣಿಪಾಲಕನರಸಿ ಬಂದಾ । ಗೆರೆಯು ನಿಂಗೆರಗಲ್ಕೆ ನುಡಿಸಿದ ಮಧುರ ವಚನದಲಿ ॥ ೧ ॥

ಕೇತಾರಗೌಳ - ಝಂಪೆ

ಚಂದ್ರಮುಖಿಯೇನು ಬಾಲೆ । ಉಡುನಿವಹ । ಚಂದ್ರ ಶೋಭಿತೆ ಸುಶೀಲೆ । ಇಂದೀವರಾಕ್ಷಿ ಕೇಳೆ । ಲೇಸಾಯ್ತು । ಬಂದುದಿಲ್ಲಿಗೆ ಸುಫಾಲೆ ॥ ೧ ॥ ದೇವಿ ನಿನ್ನಾಗಮನವು । ಸಂತೋಷ । ವೀವುದಾದರೆಯು ಮನವು ॥ ಕಾವು ಹೆಚ್ಚಿರುವಂತಿದೆ । ಮುಖ ಕಮಲ । ಭಾವವೇ ಬೇರಾಗಿದೆ ॥ ೨ ॥ ಬಾಲೆ ಪೇಳೆನಗೆ ರನ್ನೆ । ಬಾಲೇಂದು । ಫಾಲೆ ಬಂದೆಡರ ಚಿನ್ನೆ ॥ ಆಲಸ್ಯ ವೇನು ಬಂತು । ನಿನ್ನ ಮನ । ದಾಲತೆಯು ಬಾಡಿತೆಂತು ॥ ೩ ॥

ಸುರಟಿ - ಏಕ

ಲಾಲಿಸು ಎನ್ನೆರೆಯ । ನಿನ್ನೊಳು । ಪೇಳುವುದೀ ನುಡಿಯ ॥ ಆಲಸ್ಯದ ಪರಿ । ಕೇಳುವೆ ಏನ ನೃ । ಪಾಲನೆ ನಿನಗಾಂ । ಪೇಳಲಿ ಪೊಸತು ॥ ಲ ॥ ॥ ೧ ॥ ಧೊರತನ ಸಂಪದವು । ನಮಗಿದೆ । ಪುರ ಜನರುಗಳೊಲವು ॥ ನರಪತಿ ಎಲ್ಲವು । ಕರಗತವಾದರು । ಪುರುಷಾರ್ಥವದೇನ್ । ಧೊರೆಯೆ ವಿಚಾರಿಸು ॥ ಲಾ ॥ ೨ ॥ ತರಳರಿಲ್ಲದಿಹುದು । ತುಂಬದ । ಕೊರತೆಯ ದಾಗಿಹುದು ॥ ಕರುಣನಿಧಿಯೆ ತವ । ಕರುಣದಿ ಬೇರೇನ್ । ಕೊರತೆಯು ನರಸಲು । ದೊರಕದು ಯಾರಿಗು ॥ ಲಾ ॥ ೩ ॥ ತರುಣಿ ಕುಲದಿ ಪುಟ್ಟಿ । ಆಪಯಶ । ಬರುವುದು ಬೆನ್ನಟ್ಟಿ ॥ ಕರೆವರು ಬಂಜೆಯೆಂ । ಬುರು ಹಾಸ್ಯಕೆ ನಾ । ಗುರಿಯಾದೆನು ಇವ । ನೊರೆಯುವುದೆಂತೈ ॥ ಲಾ ॥ ೪ ॥

ಸಾವೇರಿ - ರೂಪಕ

ಮಡದಿ ನೀ ಪೇಳಿದ ನುಡಿ ನಿಜವರಿತಿಹೆ । ಹುಡುಗರಿಲ್ಲದರಿಂಗೆ ಸ್ವರ್ಗವಿಲ್ಲೆನುತ ॥ ಬಿಡದೆ ಜನ್ಮಾಂತರ ನರಕ ಭಾಜಕರಾಗಿ । ಪಡಬೇಕು

ಕಷ್ಟವನೆಂಬುದನರಿವೆ ॥ ೧ ॥ ನಾರಿ ಚಿಂತಿಸದಿರು ಬಿಡು ನಿನ್ನ ವ್ಯಸನವ। ಶ್ರೀ ರಮಾಧವ ದಯಃದೋರಲೇಸ್ಸನವು ॥ ವಾರಿಜನಾಭನ ಪಾದವನನು ದಿನ । ವಾರಾಧಿಸ ಲಿ (ಕಿ)ೀ ಯದಿರವಾಂಛಿತವನು ॥ ೩ ॥

ಭಾಮಿನಿ

ಇಂತು ನೃಪ ತನ್ನರಸಿಯುಳ ತಾ । ಸಂತರಂಗದಿ ನೊಂದುಕೊಳು ತಲಿ । ಸಂತವಿಸುತಿರೆ ಬಂದ ನಾರದ ನೃಪನ ಬಳಿಗಾಗಿ ॥ ಕಂತು ಜನಕನ ದಿವ್ಯ ನಾಮವ । ಸಂತಸದಿ ನುತಿಸುತ್ತ ಬರುತಿಹ । ನಂ ತಳುವದಿದಿ ಗೊಂಡು ಕರತಂದಾಸನವನಿತ್ತು ॥ ೧ ॥

ಸಾಂಗತ್ಯ - ರೂಪಕ

ದೇವ ಮೌನಿಯ ಪಾದ ಪದ್ಮಾವ ತೊಳೆದುಸ । ದ್ಭಾವದೊಳಾ ನೃಪ ತಿಲಕ ॥ ಪಾವನ ಮಮ ಜನ್ಮವೆಂದು ತೀರ್ಥವಗೊಂಡು । ಭಾವ ಶುದ್ಧದೊಳರುಹಿದನು ॥ ೧ ॥ ಮುನಿವರ್ಯ ನಿಮ್ಮ ದರ್ಶನದಿಂದಲೆಮ್ಮಯ। ಜನುಮ ಸಾರ್ಥಕವಾದುದಿನ್ನು ॥ ಜನರೆಲ್ಲ ಧನ್ಯರಾದರು ನಿಮ್ಮಾಗಮನ ದಿಂ । ಘನಪೂತವ್ಯಾತೆನ್ನ ಧರೆಯು ॥ ೨ ॥ ನೃಪನ ಸದ್ಭಕ್ತಿಯ ಕಂಡು ನಾರದ ಮುನಿ । ಯುಪಚಾರಕುರಿ ಹಿಗ್ಗುತೆಂದ ॥ ಕಪಟವಿಲ್ಲದ ನಿನ್ನ ಆತಿಥ್ಯಗಳಿಗೆ ನಾ । ನೃಪತಿ ಮೆಚ್ಚಿದೆ ತೋಷವ್ಯಾತು ॥ ೩ ॥

ಮೆಚ್ಚು - ಅಷ್ಟ

ಕೇಳಶ್ವಪತಿ ಮಹರಾಜ । ನಿನ್ನೊ । ಳ್ಪೇಳುವ ನುಡಿ ರವಿ ತೇಜ ॥ ಭೂಲಲನೆಯನಾಳ್ವ । ಪಾಲಕ ವೃಂದದಿ । ಶೀಲ ಗುಣದೊಳೆಣೆ । ಗಾಣೆನ್ನೆ ನಿನಗೆ ॥ ಕೇ ॥ ೧ ॥ ತಿರುಗುವೆ ನಾ ಜಗಮೂರ । ಕಾಂಬೆ । ಧೊರೆಗಳನಲ್ಲಲ್ಲಿ ಧೀರ ॥ ಗುರು ಧರ್ಮ ದೇವರೊ । ಳಿರಿಸದೆ ಭಕ್ತಿಯ । ತೊರೆದು ವಿವೇಕವ । ಮೆರೆದಾಡುತಿಹರಯ್ಯ ॥ ೨ ॥ ಧರ್ಮವತಾರನಂತಿ ರುವೆ । ರಾಜ । ಧರ್ಮವ ಬಿಡದೆ ಪಾಲಿಸುವೆ ॥ ನಿರ್ಮಲ ಚರಿತ್ರ ಸ್ವ । ಕರ್ಮ ಪೂರ್ಣನೆ ಹೊರಹೊಮ್ಮುತ ದುಃಖವು । ಉಮ್ಮಳಿಸುತಲಿದೆ ॥ ಕೇ ॥ ೩ ॥ ಬಾಡಿದ ಕಮಲದಂತಿರುವೆ । ಎನ್ನೊ । ಳಾಡಲು ನಿನಗೆ ಬೇಸರವೆ ॥

ನೋಡುವೆ ಚಿಂತೆಯ । ದೂಡುವ ದಾರಿಯ ರೂಢೀಶ ಸಂಕೋಚ । ಬೇಡೆನ್ನೊಳ್ಳನ್ನಡಿ ನುಡಿ ॥ ಕೇ ॥ ೪ ॥

ಬೇಹಾಗ್ – ಏಕ

ಏನನೆಂಬೆ ಮನದ ವ್ಯಥೆಯ ಮೌನಿಪಾಲ । ಸು । ಜ್ಞಾನಿ ನೀನು ತಿಳಿಯೆ ಏನ್ನೈ । ಮೌನಿಪಾಲ ॥ ಮಾನವಂತನಾಗಿ ಬಾಳ್ದೆ । ಮೌನಿಪಾಲ । ದು । ಮ್ಮಾನದಿರವ ಲಾಲಿಸಯ್ಯ । ಮೌನಿಪಾಲ ॥ ಏ ॥ ೧ ॥ ಕಾಣದಾದೆ ಪುತ್ರ ಸುಖವ । ಮೌನಿಪಾಲ । ಸ್ವರ್ಗ । ಹೀನನಾದೆನೆನ್ನುತಿರುವ । ಮೌನಿಪಾಲ ॥ ಬೇನೆವಡಲೊಳ್ಬೇಯುತಿಹುದು । ಮೌನಿಪಾಲ ! ಮುಂ । ದೇನು ದಾರಿಮಾಡಲಯ್ಯ ॥ ಏ ॥ ೨ ॥

ಕೇತಾರ ಗೌಳ – ಅಷ್ಟ

ಧರಣಿಪನೀಪರಿ । ಯರುಹಲು ಕೇಳುತ್ತ । ಸುರಮುನಿ ನಾರದನು ॥ ಬರಿವೆ ದುಃಖಿಸದಿರು । ಕರುಣಿ ಸಾವಿತ್ರಿಯು । ಪರಿಹರಿಸುವಳೆಲ್ಲವ ॥ ೧ ॥ ನಡೆ ನೀನು ವಿಪಿನಕ್ಕೆ । ಮಡದಿಯ ಕೂಡುತ್ತ । ತೊಡಗು ತಪವನೆಸಗೆ ॥ ಜಡಜಾಕ್ಷಿ ಸಾವಿತ್ರಿ । ಕೊಡುವಳಿಷ್ಟವನೆಂದು । ನಡೆದ ಹಂಸೆಯನಡರಿ ॥ ೨ ॥ ಸುರಮುನಿಪತಿ ತಾನು । ತೆರಳಲು ಭೂಪನು । ಕರೆದು ಮಂತ್ರಿಯ ಬಳಿಗೆ ॥ ತೆರಳುವೆ ತಪವ ನಾ । ಚರಿಸಲು ಕಾಡಿಗೆ । ತರುಣಿಯನೊಡಗೂಡುತ ॥ ೩ ॥ ಧೀರ ಸಚಿವ ಕೇಳು । ಧಾರುಣಿಯನು ನಿನ್ನ । ಪಾರುಪತ್ಯಕೆ ಬಿಡುತ ॥ ಚಾರು ತಪವಗೈಯ್ಯು । ತೂರಿಗೆ ಬಹವರೆ । ಗೀರಾಜ್ಯ ಪಾಲಿಸಯ್ಯ ॥ ೪ ॥ ಎಂದು ಮಂತ್ರಿಗೆ ಪೇಳು । ತಂದು ಸತಿಯು ಸಹ । ಬಂದು ಪೊರಟು ಪುರವ ॥ ಕಂದನ ಪಡೆಯುವಾ । ನಂದದಿ ಕಾಂತಾರ । ಕಂದರ ಗಿರಿ ಕಳೆದು ॥ ೫ ॥

ಭಾಮಿನಿ

ಹರಿಯುರಸಿ ಕೇಳಿಂತು ಬರುತ ಕಂಡನು ಚೆಲ್ವ । ಸರಸಿಯೊಂದದರ ಬಳಿಗಿರುವ ತಪಕೆಂದಾಗ । ಲರಸ ಸ್ವಚ್ಛದಿ ಮಿಂದು ಬರುತದರ ತೀರದಲಿ ತರುಣಿಯುಳನೊಡಗೂಡುತ ॥ ಸುರಮುನಿಪನೆಂದ ತೆರ ಕರುಣಿ ಸಾವಿತ್ರಿ

ಯಂ । ವರ ಮನದ ಬಯಕೆಯಂ ಕರುಣಿಪುದು ಎಂದೆನುತ । ಭರಿತ ಭಕ್ತಿಯೊಳೀರ್ವರಿರುತಿರಲು ತಪವನಾಚರಿಸುತ್ತ ಕೆಲದಿನಗಳು ॥ ೧ ॥

ಸೌರಾಷ್ಟ್ರ - ತ್ರಿವುಡೆ

ದೇವಿ ಸಾವಿತ್ರಿಯನು ಭಕ್ತಿಯೊ । ಳಾವಿಭುವು ದಿನದಿನದಿ ಪ್ರಾರ್ಥಿಸು । ತೀವುತೆನ್ನಯ ಮನದ ಬಯಕೆಯ । ಕಾವುದವ್ಮ ॥ ೧ ॥ ಮಾಯೆ ಮಂಗಲಕಾಯೆ ಭಕ್ತ ಸ । ಹಾಯೆ ಮುನಿಜನಗೇಯೆ ವಿಶ್ವ ಪು । ಪ್ರೀಯೆ ಲೋಕದ ತಾಯೆ ದೀನನ । ಕಾಯೆ ಜನನಿ ॥ ೨ ॥ ಭೂಮಿ ಪತಿಯನವರತಮೀಪರಿ । ಕಾಮಿತಾರ್ಥವನೀವುದೆನ್ನುತ । ಭಾಮೆ ಸಾವಿತ್ರಿಯನು ಪ್ರಾರ್ಥಿಸ । ಲಾ ಮಹಿಮೆಯು ॥ ೩ ॥ ತನ್ನ ಭಕ್ತನ ಖಂಡ ಭಕ್ತಿಗೆ । ಕನ್ನೆಮೆಚ್ಚುತಲೊಲಿದು ನಿಜ ರೂ । ಪನ್ನು ತೋರಿಸೆ ಬಂದಳಲ್ಲಿ ಪ್ರ । ಸನ್ನ ಮುಖಿಯು ॥ ೪ ॥ ನೋಡಿ ಭೂವರ ಮನದಿ ಸಂತಸ । ಗೂಡಿ ಪತ್ನಿಯು ಸಹಿತ ದೇವಿಯ । ಪಾಡಿ ಪದ ಸರಸೀರುಹ ದೊಳೀ । ಡಾಡೆ ಶಿರವ ॥ ೫ ॥

ಭೈರವಿ - ಝಂಪೆ

ಪಾದ ಪದ್ಮಕೆ ಮಣಿದ । ಮೇದಿನೀಶನನೆತ್ತಿ । ತಾ ದಯಾ ಘನೆಯು ಸನ್ಮೋದದಿಂ ಬಳಿಕ ॥ ೧ ॥ ಭೂಲಲಾಮನೆ ಭಕ್ತ । ಶೀಲ ನಿನ್ನಯ ತಪದ । ಪಾಲಿಕೆಯ ಕಂಡು ನರ । ಪಾಲ ಮೆಚ್ಚಿದೆನು ॥ ೨ ॥ ಬೇಡು ನಿನ್ನಯ ಮನದ । ಬೇಡಿಕೆಯನೆಲ್ಲ ನಾ । ನೀಡಲೋಸುಗ ಬಂದೆ । ಮಾಡದಿರು ವ್ಯಥೆಯ ॥ ೩ ॥ ಎಂದೆನಲು ರೂಢಿಪತಿ । ತಂದು ಧೈರ್ಯವ ಮನದಿ । ಇಂದೀವರಾಕ್ಷಿಗಭಿ । ವಂದಿಸುತ ನುಡಿದ ॥ ೪ ॥ ತಾಯೆ ಕೇಳೆನ್ನ ಮನ । ನೋಯುತಿಹ ಪರಿಯ ಮಹ । ಮಾಯೆ ನೀನರಿಯೆಯ । ನಾನೇ ನನೆನಲಿ ॥ ೫ ॥ ಇಂದು ಪರಿಯಂತರ ವ । ಸುಂಧರೆಯನಾಳ್ದೆ ಜನ । ಸಂ ದಣಿಯು ದಣಿಸದೆಯೆ । ಕುಂದು ಬರದಂತೆ ॥ ೬ ॥ ಮುಂದಿನ್ನು ಎನ್ನತೆರ । ಚಂದದಲಿ ಪಾಲಿಸುವ । ಕಂದರಿಲ್ಲದುದಕ್ಕೆ । ಕಂದಿಹೆನು ಮನದಿ ॥ ೭ ॥ ನೀಡಮ್ಮ ಸುತನ ದಯ । ಮಾಡಮ್ಮ ವರಗಳನು । ನೋಡಮ್ಮ ದಯದಿ ಕಾ । ಪಾಡಮ್ಮ ಎನ್ನ ॥ ೮ ॥

ನವರೋಜು - ಏಕ

ಭೂಪತಿ ವಂಶಲಲಾಮ । ಬಿಡು । ತಾಪವನು ಗುಣಧಾಮ ॥ ನಾ ಪಾಲಿಪೆನು ಪ್ರ । ಲಾಪಿಸದಿರು ಸುಕ । ಲಾಪನೆ ಶಶಿಕುಲ । ದೀಪನೆ ಕೇಳ್ಳೈ ॥ ಭೂ ॥ ೧ ॥ ತರಳೆಯೊರ್ವಳು ನಿನಗೆ । ನೃಪ । ವರನೆ ಪುಟ್ಟುವ ಹಾಗೆ ॥ ಹರಸುವೆನೈ ಶುಭ । ಚರಿತನೆ ಕೀರ್ತಿಯು । ಧರಿಸುತ ಪಾಲಿಸು । ಧರೆಯ ನಿರಂತರ ॥ ೨ ॥ ಎನಲು ಭೂಮಿಪ ಕೇಳಿ । ತನ್ನ । ಮನದಿ ಬೇಸರ ತಾಳಿ ॥ ಚಿನುಮಯಿಗುಸುರಿದ । ತನುಜೆಯನಿತ್ತುದು । ಘನ ಪರಿತೋಷವು । ಎನಗಹುದಾದರು ॥ ೩ ॥ ಕರುಣನಿಧಿ ಸುತೆಯಿಂದ । ಸುಖ । ದೊರೆವು ದೆಂತದರಿಂದ ॥ ತರಳನುಡಿಪ ತೆರ । ಹರಸೆಂದೆನ್ನುತ । ಲೆರಗಿದ ಭೂಪನ । ಪರಿಕಿಸಿ ನುಡಿದಳು ॥ ೪ ॥

ಭಾಮಿನಿ

ಧರಣಿಪಾಲಕ ನೀನು ಮನದೊಳ । ಗಿರಿಸದಿರು ಮಗಳೆಂದು ಚಿಂತೆಯು । ತರುವಳುನ್ನತ ಕೀರ್ತಿಯನು ನಿಮ್ಮುಭಯ ಕುಲಗಳಿಗೆ ॥ ತರ ಳರುದಿಪರು ಮುಂದಕವಳಿಂ । ತರುಣಿಯರ ಹದಿಬದೆಯ ಧರ್ಮದ । ಚರಿತೆ ಸಾರುವಳಖಿಳ ಜಗ ಕೊಂಡಾಡುಪಂದದಲಿ ॥ ೧ ॥

ಕಾಂಬೋಧಿ - ಝಂಪೆ

ವಿಶ್ವತೋಮುಖಿಯಿಂತು । ಅಶ್ವಪತಿ ನೃಪಗೊರೆದ । ದೃಶ್ಯವಾ ದಳು ಮಹಾಮಾಯೆ ॥ ವಿಶ್ವನುತೆ ತೆರಳೆ ಧರ । ಣೀಶ್ವರನು ಪೊರಟನಖಿ । ಳೇಶ್ವರಿಯ ಮನದಿ ಕೀರ್ತಿಸುತ ॥ ೧ ॥ ರಸೆಯಧಿಪನಾಗ ಮುಂ । ದೆಸೆವ ವಿಪಿನವ ಕಳೆದು । ಕುಸುಮ ಗಂಧಿಯು ಸಹಿತ ಪುರಕೆ ॥ ಪಸರಿಸುವ ಸಂತೋಷ । ದೊಸಗೆಯಿಂದೈತಂದ । ವಸವಂತನಾಗಮನದಂತೆ ॥ ೨ ॥ ಇಂತು ನೃಪ ಸತಿಯೊಡನೆ । ಸಂತೋಷದಿಂದಿರಲು । ಕಾಂತೆ ಧರಿಸಿದಳು ಗರ್ಭವನು ॥ ದಂತಿಗಮನೆಯ ಮನಸಿ । ನಂತರವ ಸಲಿಸಿ ಸೀ । ಮಂತ ಮುಂತಾದುವನೆ ರಚಿಸಿ ॥ ೩ ॥ ಬಳಿಕ ನವ ಮಾಸಗಳು । ಕಳೆಯ ಲೊಂದಿನ ನೃಪನ । ಲಲನೆಯಾ ಶುಭ ಮುಹೂರ್ತದಲಿ ॥ ಸಲಿಲಜ ಭವಾಂಡ ಸ । ತ್ಕುಲಜೆಯರ ನಿಕುರುಂಬ । ತಲೆಯ ಮಾಣಿಕವ ಪ್ರಸ

ವಿಸಲು ॥ ೪ ॥ ಕೇಳಿ ಭೂವರ ಮನದಿ । ತಾಳಿ ಸಂತಸ ವಿಪ್ರ । ಜಾಲ ವನು ಕರೆ ತರಿಸಿ ಬಳಿಕ ॥ ಕಾಲ ಕಟ್ಟಳೆಯಂತೆ । ಬಾಲೆಗ್ಹನ್ನೊಂದರಲಿ । ಶೀಲ ನೃಪಗೈಸೆ ಪುಣ್ಯಾಹ ॥ ೫ ॥ ದೇವಿಯಳ ಕರುಣದಿಂ । ದಾವಿರ್ಭವಿಸಿದ ತರಳೆ । ಸಾವಿತ್ರಿ ಎಂದೆನುತ ಕರೆಯೆ ॥ ದೇವ ಬ್ರಾಹ್ಮಣರ ಮನ । ಭಾವವೆಲ್ಲವ ಸಲಿಸಿ । ಭೂವರನು ಮನ್ನಿಸಿದ ಬಳಿಕ ॥ ೬ ॥

ಸೌರಾಷ್ಟ್ರ – ತ್ರಿವುಡೆ

ಇತ್ತಲೀಪರಿಯಿಂದ ಸಂತಸ । ವೆತ್ತು ಭೂಮಿಪನಿರಲು ಸಾಲುವ । ಪೃಥ್ವಿಪಾಲ ದ್ಯುಮತ್ಸೇನಾಖ್ಯನು । ಆರ್ತಿಯಿಂದ ॥ ೧ ॥ ಪುತ್ರರಂದದಿ ಪ್ರಜೆಗಳನು ಪೊರೆ । ಯುತ್ತ ಭಾಗ್ಯಾಧಿಕನೆನಿಸಿ ಮೆರೆ । ವುತ್ತಲೀರ್ದನು ಸ್ವರ್ಗಭೋಗಕೆ । ಹತ್ತುಮಡಿಯು ॥ ೨ ॥ ಅಷ್ಟಭಾಗ್ಯದೊಳೆಸೆಯೆ ತನ್ನಯ । ಪಟ್ಟದರಸಿಯು ಶೈಭ್ಯೆಪೆತ್ತಿಹ । ಪುಟ್ಟ ಮಗುವಹ ಸತ್ಯವಾನನ । ಸೃಷ್ಟಿಪಾಲ ॥ ೩ ॥ ಜರೆತನದೊಳುದಿಸಿರುವ ಕಾರಣ । ಹರಣದಿಂದಿಮ್ಮಡಿಯ ಪ್ರೇಮದಿ । ಪೊರೆಯುತೀರ್ದನು ಪತ್ನಿಯೊಡನಾ । ಧರಣಿಪತಿಯು ॥ ೪ ॥

ಭಾಮಿನಿ

ಜನನಿ ಜನಕರ ಮನಕೆ ಹರುಷವ । ನುಣಿಸಿ ತನ್ನಯ ಬಾಲ್ಯವನು ಕಳೆ । ದಣುಗ ಸದ್ವಿದ್ಯೆಗಳ ಗುರುಮುಖದಿಂದ ಕಲಿತಿರಲು ॥ ವಿನಯಶೀಲನು ಸತ್ಯವಾನನು । ಜನಕನಿದಿರಿಗೆ ಬರುತ ವಂದಿಸೆ । ತನಯನನು ತೆಗೆದಪ್ಪಿ ಕುಳ್ಳಿರಿಸುತ್ತ ಪೇಳಿದನು ॥ ೧ ॥

ಸುರುಟಿ – ಏಕ

ಬಾಲ ಕೇಳು ವಿನಯ । ಸದ್ಗುಣ । ಶೀಲನೆನ್ನ ನುಡಿಯ ॥ ಪೇಳುವೆ ನಿನ್ನಯ । ಏಳಿಗೆಗಿಹ ಪರಿ । ಯಾಲೋಚಿಸುತಲಿ । ಬಾಳು ನಿರಂತರ ॥ ಬಾ ॥ ೧ ॥ ಪೃಥ್ವಿಯನಾಳಿದೆನು । ನಾ ಬಲು । ಕೀರ್ತಿಯ ಧರಿಸಿದೆನು ॥ ಪುತ್ರನೆ ಮುಪ್ಪಿನ । ವಸ್ಥೆಯೊಳಿಹೆನೀ । ಧಾತ್ರಿಯ ಪಾಲಿಸೆ । ಸತ್ವವು ಕುಂದಿದೆ ॥ ಬಾ ॥ ೨ ॥ ಆಗದು ಎನ್ನಿಂದ । ಮುಂದಕೆ । ಸಾಗದು ಕ್ರಮದಿಂದ ॥ ಸಾಗಶಯನನನು । ರಾಗದಿ ಧ್ಯಾನಿಸಿ । ಭೋಗವನೆಲ್ಲವ । ನೀಗಿ

ವಿರಮಿಸುವೆ । ಬಾ ॥ ೩ ॥ ಪಾಲಿಸು ನೀ ಧರೆಯು । ಕೀರ್ತಿಯು । ಬಾಲನೆ ಧರಿಸಯ್ಯ ॥ ಭೂ ಲಲನೆಯ ಜನ । ಜಾಲವನೆಲ್ಲವ । ಬಾಲರ ತೆರದಲಿ । ಪಾಲಿಸು ಪ್ರೇಮದಿ ॥ ಬಾ ॥ ೪ ॥

ಧನಾಸರಿ – ಝಂಪೆ

ಧಾರುಣೀಪತಿಯು ಸುಕು । ಮಾರನಿಗೆ ಸರ್ವಾಧಿ । ಕಾರ ನೀಡುವೆನೆಂಬ ಮಾತ ॥ ಶೂರನಾಲಿಸಿ ನುಡಿಯು । ಪೂರಯಿಪೆನಾದರೆಯು । ಬೇರೊಂದ ನೆನೆದಿರುವೆ ಮನದಿ ॥ ೧ ॥ ದೇಶ ಸಂಚಾರವನು । ಆಶಿಸುವೆ ಪಿತನೆ ಪರ । ದೇಶಿಗರ ನಡತೆಯೆಲ್ಲವನು ॥ ಈಶ ನಿರ್ಮಿತ ಜಗದ । ಕ್ಲೇಶ ಲೇಸುಗಳರಿವ । ಆಸೆ ಮನಸಿನೊಳಂಕುರಿಸಿದೆ ॥ ೨ ॥ ಆದರಿಂದಲಸುಮತಿಯು । ಮುದದೊಳೀವುದು ಪಟ್ಟ । ಕೊದಗುವೆನು ಪೋಗಿ ಬಂದೊಡನೆ ॥ ಮುದಿತನದೊಳೆಮ್ಮನಗ । ಲಿದನೆಂದು ಜೇಸರಿಸ । ದಿದನೊಂದ ನಡೆಸಿಕೊಡಿರೆನಲು ॥ ೩ ॥ ಕಂದ ನಿನ್ನಯ ಮನಕೆ । ಬಂದುದೇನುಸುರೀವ । ಸುಂಧರೆಯ ಕಷ್ಟಸುಖವರಿವ ॥ ಸಂದರ್ಭವನು ಗ್ರಹಿಸ । ದೆಂದಪೆಯ ಮುದಿ ತಾಯಿ।ತಂದೆಯರ ಪಾಡನೀಕ್ಷಿಸದೆ ॥ ೪ ॥ ಜರೆತನದೊಳಿಹೆವೆಮ್ಮ । ಕರದೂರುಗೋಲಿನಂ । ತಿರುವ ಮುದ್ದು ಕುಮಾರ ನೀನೆ ॥ ತೊರೆಯು ತೆಮ್ಮನು ದೇಶ । ಚರಿಸೆ ಪೋಗುವ ಮನದ । ಬರಿಯ ಕಲ್ಪನೆಯು ಲೇಸಲ್ಲ ॥ ೫ ॥

ಭಾಮಿನಿ

ಧರಣಿಪನ ನುಡಿ ಕೇಳುತೆಂದನು । ತರವೆ ನೀವಿಪರಿಯೊಳೆಂಬುದು । ತರಳನಭ್ಯುದಯದೊಳು ಮುನಿಸೇ ಪಿತನೆ ಕೆಲ ದಿವಸ ॥ ಮರುಗದಿರಿ ನೀವಲ್ಪ ಸಮಯದಿ । ತಿರುಗಿ ಬಹೆ ನಾಮೇಲೆನಿಮ್ಮಯ ; ಹರಕೆಯಿಂದದಿರಸೆಯ ಪಾಲಿಪೆನೆನುತ ಜೇಳ್ಕೊಂಡ ॥ ೧ ॥

ಭೈರವಿ – ಝಂಪೆ

ಎಂದಾಗ ಚಿತ್ರಾಶ್ವ । ತಂದೆಗೊಂದಿಸಿ ತೆರಳೆ । ಬಂದ ಪರಿಭವವನೇ । ನೆಂದಪೆನು ನೃಪಗೆ ॥ ೧ ॥ ತರಳ ತಪ್ಪಿದನೆಂಬ । ಕುರುಹ ತಿಳಿದನು

ಗೂಢ । ಚರರಿಂದ ಬೇಗದಲಿ । ದುರುಳ ಮಗಧೇಶ ॥ ೩ ॥ ಭಳಿರೆ ಲೇಸ್ಸಾಯ್ತೆಂದು । ತಿಳಿದು ಮನದಲಿ ಹರುಷ । ತಳೆದುಸುರಿದನು ಮಂತ್ರಿ । ಗಿಳೆಯಾಣ್ಮನಗುತ ॥ ೩ ॥ ಧೀ ಸಚಿವ ಕೇಳೆನ್ನ । ಆಸೆ ಫಲಿಸುವ ಕಾಲ । ವೀ ಸಮಯವೆಂದೆಮಗೆ । ಭಾಸವಾಗುತಿದೆ ॥ ೪ ॥ ಸಾಲ್ವಪುರದವನಿಪನ । ಚೆಲ್ಲ ಬಡಿದಾರಾಜ್ಯ । ವೆಲ್ಲ ಕೈವಶಮಾಡ । ಲಿಲ್ಲವಲ ನಾವು ॥ ೫ ॥ ನೆನೆದಿರುವ ಕಾರ್ಯವಿದು । ತನಕ ಮನಸಿನೊಳಿತ್ತಾತು । ಕನಸಿನೊಳು ಕಂಡ ಗಂ । ಟೆನಿಸಿತೀವರೆಗೆ । ೬ ॥ ಧೊರೆ ದ್ಯುಮತ್ಸೇನಕನ । ತರಳ ಧರೆ ಯನು ಚರಿಸೆ । ತೆರಳಿಹನು ಎಂಬ ಪರಿ । ಯರಿತೆ ಚರರಿಂದ ॥ ೭ ॥ ಇನ್ನಲ್ಲಿಗೈದಲೆ । ಮ್ಮನ್ನು ತಡೆಯುವರಿಲ್ಲ । ಕುನ್ನಿ ವೃದ್ಧ ನೃಪಾಲ । ಗಣ್ಯ ವೇನಮಗೆ ॥ ೮ ॥ ಆದರಿಂದಲೀಗ ನಾವ್ । ಪದೆದಾ ನೃಪಾಲಕನ । ಸದನ ಕೈವಶಮಾಡ । ಲಿದು ಯೋಗ್ಯ ಸಮಯು ॥ ೯ ॥ ಭರದಿ ಪೋಗುವು ದೆನ್ನು । ತರುಹಿ ಮಂತ್ರಿಗೆ ಧಾತ್ರಿ । ಯರಸನಣಿ ಮಾಡಿದನು । ಪೊರಡ ಲೆಂದೆನುತ ॥ ೧೦ ॥

ಭೈರವಿ - ತ್ರಿವಿಡೆ

ಬಂದನಾಗ । ನೃಪಾಲಸೈನ್ಯವ । ತಂದನಾಗ ॥ ಪ ॥ ಬಂದನಾ ಮಗಧೇಶ ಸೈನ್ಯದ । ವೃಂದದೊಡಗೂಡುತ್ತ ಸಾಲ್ವ ವ । ಸುಂಧರಾಧಿಪ ನನ್ನು ಜೈಸುವೆ । ನೆಂದೆನುತ ಹಮ್ಮಿನೊಳಗುಬ್ಬುತ । ಮುಂದಿ ಮಾರ್ಬಲ ವನ್ನು ಕೂಡುತ । ಹಿಂದು ಮುಂದಕೆ ನೋಡಿ ನಸು ನಗೆ । ಯಿಂದ ಮುಂದೆಸೆ ಶೋಭಿಸುತ್ತಿಹ । ಚಂದವಾಗಿಹ ನಾಡ ಸಿರಿಯನು ॥ ಬಂ ॥ ೧ ॥ ಕಂಡು ಮಗಧ ನೃಪಾಲ ಮನಸಿನ । ಮಂಡಿಗೆಯ ತಿನ್ನುತ್ತ ರಾಜ್ಯದ । ಮುಂಡೆಯಂತಿಹ ರಾಜಧಾನಿಯ । ಖಂಡಕೋಟೆಯ ಬಳಿಗೆ ಬರುತು । ದ್ಧಂಡಸತ್ವದಿ ಮುತ್ತಿ ಕಾವಲ । ತಂಡವನು ಬೆದರಿಸುತ ಪೇಳಿದ । ಮಂಡಲಾಧಿಪನನ್ನು ಯುದ್ಧಕೆ । ಕೊಂಡು ಬಹುದೆಂದೆನುತ ನೂಕಿಸಿ ॥ ಬಂ ॥ ೨ ॥

ಕಂದಪದ್ಯ

ನೂಕಿದ ಚಾರರು ಬಂದಾ । ಸಾಕಿದವನ ಕಾಲಿಂಗೆರಗುತ ಭೀತಿ ಯೊಳುಂ ॥ ನಾವಸ್ಕಣೆವು ಈ ಪರಿಯಂ । ನೀಕಾವುದೆಂದು ವಿನಯದೊಳು ಸುರಿದರಾಗಂ ॥ ೧ ॥

ಕೇತಾರ ಗೌಳ – ಝಂಪೆ

ಕೇಳಯ್ಯ ಸಾಲ್ವ ಭೂಪ । ನಿನ್ನೊಡನೆ । ಪೇಳುವೆವು ಸುಪ್ರತಾಪ ॥ ಕಾಲನಂದದ ರೋಷವ । ತಳೆದುರಿಪು । ಜಾಲ ಮುತ್ತಿದೆ ನಗರವ ॥ ೧ ॥ ಮಗಧ ದೇಶವನಾಳುವ । ದೊರೆಯಂತೆ । ನಗರ ಸೂರೆಯ ಮಾಡುವ । ಬಗೆಯನೇನೆಂಬೆ ಜೀಯ । ಅವರೆಸಗು । ವಗಡುತನಗಳನುರಾಯ ॥ ೨ ॥ ಕೋಟೆಯನು ಮುತ್ತಿರುವರು । ತಡೆಯೆ ನ । ಮ್ಮಾಟವನೆ ನಿಲಿಸುತವರು ॥ ಚಾಟಿ ಕೊರಡೆಗಳಿಂದಲಿ । ಹೊಡೆದರ್ಕೈ । ಏಟುಗಳನೇನೆನ್ನಲಿ ॥ ೩ ॥ ಕೈಯ್ಯ ಬಿಗಿದರು ಮೂರ್ಖರು । ಸುಣ್ಣದಿಂ । ದಯ್ಯ ನಾಮವನೆಳೆದರು ॥ ಮೈಯ್ಯೆಲ್ಲ ನೋಯುತಿಹುದು । ಏಟ ದ । ಮ್ಮಯ್ಯ ತಾಳೆವು ನಿಜವಿದು ॥ ೪ ॥ ಅರಸನೊಳು ಪೋಗಿ ಪೇಳಿ । ಎನ್ನೊಡನೆ । ಧುರಕಾಗಿ ಇದಿರು ಬರಲಿ ॥ ಕರತನ್ನಿರೆಂದೆನ್ನುತ । ಪೇಳಿದನು । ಗರುವದಿಂ ಕೇಳು ಮಾತ ॥ ೫ ॥

ಭಾಮಿನಿ

ಕೇಳುತಲಿ ಚರರೆಂದ ಮಾತನು । ತಾಳಿ ದುಗುಡವ ಮನದೊಳೆನ್ನಯ । ಬಾಳುವೆಯೆ ಹಾಳಾಯಿತಕಟಾ ಸುತ ವಿಯೋಗದಲಿ ॥ ಬಾಳಿಗಡರಿದ ಮುಪ್ಪ ತಿಳಿದೀ । ವೇಳೆಯನು ಸಾಧಿಸುತ ಬಂದಿಹ ಖೂಳನೊಳು ನಾನೆಂತು ಕಾದುವೆನೆನುತ ಮರುಗಿದನು ॥ ೧ ॥

ನೀಲಾಂಬರಿ – ರೂಪಕ

ಹರಹರ ಎನ್ನಯ ಪಗೆಗಳ । ತರಿಯುವೆನೆಂತೀ ಧರಣಿಯ । ಪೊರೆಯುವೆ । ಮುಪ್ಪಿನ ಕಾಲದಿ । ದೊರಕಿತೆ ಈ ವಿಧಿಯು । ತರಳನು ಪೋಗುವ ಸಮಯದಿ । ತೆರಳದಿರೆಂದೆನುತಲಿ ನಾ । ನೊರೆದರು ಕೇಳದೆ ಪೋದನು । ಧರೆಯನು ಸಂಚರಿಸೆ ॥ ೧ ॥ ಅರಿ ನೃಪರಿದಿರಿಗೆ ಶೌರ್‍ಯದಿ । ಧುರದಲಿ ಕಾದುವ ಸತ್ವವು । ಜರೆತುಂಬಿದ ತನಗೆಂತೈ । ಬರುವುದು ಮುಂದಿನ್ನು ॥ ಸರಸಿಜ ಸಂಭವನೆನ್ನಯ । ಶಿರದೊಳಗೇನೆಂದೆನುತಲಿ । ಬರೆದನೊ ತಿಳಿಯೆನು ಲಕ್ಷ್ಮೀ । ವರನೀ ದಯಮಾಡು ॥ ೨ ॥ ಏತಕೆ ಮರುಗುವೆ ಸುಮ್ಮನೆ । ಏತಕೆ ದೂರುವೆ ವಿಧಿಯನು । ಪಾತಕಿ ನಾನದರಿಂದೀ ।

ರೀತಿಯು ಸವನಿಸಿತು ॥ ಪಾರ್ಥಿವ ಪಂಥವಿ ಕಾದುವೆ । ಭೂತಳ ಮೆಚ್ಚುವ ತೆರದಲಿ । ಖ್ಯಾತಿಯು ಪಡೆವೆನೆನುತ ನರ । ನಾಥನು ಸಿಕ್ಕೈಸಿ ॥ ೩ ॥

ವಾರ್ಧಿಕ್ಯ

ಧಾರುಣಿಪನೀತೆರದಿ ಯೋಚಿಸುತ ಮನದೊಳಗೆ । ವೀರಮಂತ್ರಿಯ ಕರೆದು ಪೇಳಿದನು ವೈರಿಗಳ । ಸೂರೆಗೊಳುವುದಕಾಗಿ ನೆರಹುವುದು ಬೇಗದಲಿ ಮಂದಿಗಜರಥ ತುರಗವ ॥ ಶೂರ ನೃಪನಿಂತರುಹಿ ರಥವೇರಿ ಪೊರಡಲಾ । ಸಾರಥಿಯು ಹಯುಗಳಂ ಬೋಳೈಸಿ ನಡೆದು ರಣ । ಧಾರುಣಿಯು ಪೊಗೆ ಕಂಡು ಮಗಧೇಶ ಬೊಬ್ಬಿರಿದು ನುಡಿದನಾ ಸಾಲ್ವಪತಿಗೆ॥೧॥

ಮಾರವಿ - ಅಪ್ಪ

ಭಳಿರೆ ಭೂಪಾಲ ನೀ । ತಿಳಿದಿಲ್ಲಿ ಬಂದೆಯು । ಕೊಳುಗುಳಕೆನ್ನೊಡನೆ । ಛಲಬೇಡ ಮರುಳೆ ನಿ । ನ್ನಿಳೆಯ ನೊಪ್ಪಿಸುತಲಿ । ನಿಳಯಾಕೆ ಸಾರೊ ಬೇಗ ॥ ೧ ॥ ತೆರಳಲೋಸುಗವಿಲ್ಲಿ । ಬರಲಿಲ್ಲ ಕೇಳೆಲೊ । ಧುರುಕಾಗಿ ಬಂದಿಹೆನು ॥ ತರಳನೆ ಸುಮ್ಮನೆ । ಪುರವ ಮುತ್ತಿದುದೇಕೆ । ಅರುಹು ನೀನದನೆನ್ನೊಳು ॥ ೨ ॥ ಪಾರ್ಥಿವ ಪಂಥದಿ । ಧಾತ್ರಿಯು ಗೆಲುವರೆ । ಧೂರ್ತನೆ ಬಂದಿಹೆನು ॥ ಸತ್ವವ ತೋರದೆ । ಪೃಥ್ವಿಯನಿತ್ತರೆ । ಮೃತ್ಯುವು ತಪ್ಪುವುದು ॥ ೩ ॥

ಮಾರವಿ - ಏಕ

ಹಗೆತನವಿಲ್ಲದೆ । ಬಗೆದೆಯ ಭೂಮಿಯ । ಹಗುರವಿದೆಂದರಿತು ॥ ಹೊಗಿಸುವೆ ಶೈಮಿನಿ । ಬಗಿಯುತ ಕರುಳನು । ತೆಗೆಯುವೆ ನೋಡೀಗ ॥ ೧ ॥ ವೃದ್ಧನು ನೀನಾ । ಗಿದ್ದೀಪರಿಯೊಳು । ಯುದ್ಧರೆ ಜೆವರುವೆನೆ ॥ ಬಿದ್ದರೆ ನಿನ್ನನು । ಎದ್ದೇಳಿಸುವವ । ರಿದ್ದರೆ ಕರತಹುದು ॥ ೨ ॥ ಜರೆತನ ತುಂಬಿದ । ಪರಿಯನು ನೋಡುತ । ಲೊರವೆಯ ಈ ರೀತಿ ॥ ತರಳನೆ ಮುಪ್ಪೇನ್ । ಶರಗಳಿಗಿಲ್ಲವು । ಪರಕಿಸು ನೀ ಧುರದಿ ॥ ೩ ॥

ಪಂಚಾಗತಿ॥ - ಮಟ್ಟೆ

ಭಳಿರೆ ಭೂಪ ಎನ್ನೊಳಿನಿತು । ಛಲವ ತೋರ್ಪೆಯಲ್ಲೊ ನಿನ್ನ । ನಿಳಯವನ್ನು ಬಿಟ್ಟು ಪೋದ । ರೊಳಿತು ನಿನಗದು ॥ ಇಳೆಯೊಳಾಸೆ

ಇಟ್ಟು ಕಾದೆ। ಕಳುಹಿಸುವೆನು ಪ್ರೀತ ಪತಿಯು। ನಿಳಯಕಾಗಿ ನಿನ್ನ ಸೀಗ।
ಛಲವಪರಿಕಿಸು ॥ ೧ ॥ ಪ್ರೀತ ಪತಿಯು ಸಂಟತನಕೆ । ಪಾತಕೀಯೆ ನಿನ್ನ
ಕಳುಹಿ । ಭೂತಳದಲಿ ವರಿಸಲಿಹೆನು । ಕೀರ್ತಿಕಾಮಿನಿ ॥ ಧಾತ್ರಿಪಾಲ
ಕೇಳು ಸುವ್ಮ । ನೇತಕಾಗಿ ವೃದ್ಧನೊಡನೆ । ಸೋತುಪೋದನೆನ್ನು ಪಪ ।
ಕೀರ್ತಿಪೊದ್ದುವೆ ॥ ೨ ॥ ಎನಲು ಕೇಳುತಾಗ ಮಗಧ ॥ ಜನಪ ತಳೆದು
ರೋಷವನ್ನು । ಧನುವನೊದರಿಸುತ್ತ ಕನಲಿ । ಕಣೆಯು ಸುರಿಸಲು ।
ಕಣನೊಳ್ಳೈದಿ ಮುಂದೆ ಬರುವ। ಕಣೆಯ ತರಿದು ಪ್ರತಿ ಶತೌಘ । ಜನಪ
ನಂಗಕೆಸೆದನಾಗ । ಕಿನಿಸಿನಿಂದಲಿ ॥ ೩ ॥ ಬರುವ ಶರವ ತರಿದು ಮಗಧ॥
ಪರಿಘವನ್ನು ತೆಗೆದು ಬಿಸುಡೆ । ಶಿರಕೆ ತಾಗಲಾಗ ಧರಣಿ । ಗುರುಳಿ
ಬಿದ್ದನಃ ॥ ತರಳ ಸತ್ಯವಾನನನ್ನು । ಕರೆಯುತಾ ನೃಪಾಲ ಮೂರ್ಛೆ ।
ಗಿರದೆ ಸಂದನೇನನೆಂಬೆ । ಧುಗದ ಪರಿಯನು ॥ ೪ ॥

ಭಾಮಿನಿ

ಧರಣಿಪಾಲಕನಿಂತು ಮೂರ್ಛೆಯ । ಧರಿಸಿ ಬಿದ್ದಿಹ ಪರಿಯ
ಕಾಣುತ । ಧುರದ ಜಯದಾಟೋಪದಿಂದಲಿ ಮಗಧ ಭೂಪಾಲ ॥ ಪುರ
ವರವ ಪೊಗುತೊಡನೆಯಲ್ಲಿಹ । ಸಿರಿಯು ತನ್ನೊಶವಾಡಿಕೊಳುತಲಿ ।
ಧರಣಿಪಾಲಕನರಸಿ ಶೈಭ್ಯೆಯ ತರಿಸೆ ದೂತರೊಳು ॥ ೧ ॥

ಕೇತಾರಗೌಳ – ಅಷ್ಟ

ಚಾರಕರಿರ ನಿವ್ರೊ । ಳರುಹುವೆ ಕೇಳಿರಿ । ನಾರಿಸಹಿತ ನೃಪನ ॥
ಕಾರಡವಿಯೊಳ್ಬಿಡು । ತೂರೀಗೆ ಬಹುದೊಂದು । ಕಾರಿಯು ಮುಂಟು
ಪೇಳ್ವೆ ॥ ೧ ॥ ಕುನ್ನಿ ನೃಪಾಲನ । ಕಣ್ಣ ಕೀಳುತಲೆನ । ಗೆನ್ನು ವೃದ್ಧೆಯು
ಪರ ॥ ಉನ್ನತಿಕೆಯ ತೋರಿ । ರಿನ್ನೇನು ಯೋಚನೆ । ಬನ್ನಿರಿ ಪೋಗಿ
ಬೇಗ ॥ ೨ ॥ ಎಂದೆನೆ ಕೇಳುತ್ತ । ಲೊಂದಿಸಿ ಪೊರಟಾಗ । ಬಂದು ಹಿಡಿದು
ನೃಪನ ॥ ಮುಂದಲೆಯನು ಪಿಡಿ । ದಿಂದೀವರಾಕ್ಷಿಯು । ತಂದರು ವನಕಾ
ಗಲೆ ॥ ೩ ॥ ಕಾಡಿನೊಳಿರಿಸುತ್ತ । ನಾಡಿಗೊಡೆಯನನ್ನು । ರೂಢೀಶ
ನೆಂದ ತೆರ ॥ ಮಾಡಿದು ತಿರುಗಿ ಬಂ । ದಾಡಿದರೆಲ್ಲವ । ಗಾಢದಿಂದ
ವನಿಪಗೆ ॥ ೪ ॥ ಚಾರಕರೆಸಗಿರ್ಪ । ವಾರತೆಯನು ಕೇಳಿ । ಭೂರಿ

ಹರುಷ ತಾಳುತ ॥ ಧಾರುಣಿ ಪಾಲಕ । ಪಾರಿತೋಷಕವನು । ದಾರತೆ ಯಿಂದೀಯುತ ॥ ೫ ॥

ಸೌರಾಷ್ಟ್ರ - ತ್ರಿವುಡೆ

ಇತ್ತಲೀಪರಿಯಿಂದಲಿರುತಿರ। ಲತ್ತ ಧರೆಯನು ಚರಿಸೆ ಪೋಗಿಹ। ಸತ್ಯವಾನನು ತಿಳಿದನೀಪರಿ। ವಾರ್ತೆಗಳನು ॥ ೧ ॥ ತಾತ ಸಂಗರದಲ್ಲಿ ವೈರಿ। ವ್ರಾತದೊಳು ಹ್ಯೊದಾಡುತಂತ್ಯಕೆ। ಸೋತು ಕಾಡನು ಸೇರ್ದ ನೆನ್ನುವ। ರೀತಿಯನ್ನು ॥ ೨ ॥ ನಾಡ ಜನಗಳು ತಮ್ಮತವ್ಮ್ಮೊಡ। ನಾಡುತಿಹ ಪರಿಯರಿತು ತಂದೆಯ। ನೋಡಲೋಸುಗ ಬಂದ ತನ್ನಯ। ನಾಡಿಗಾಗಿ ॥ ೩ ॥ ಬಂದು ಪುರ ಜನರನು ವಿಚಾರಿಸೆ। ಹಿಂದೆ ನಡೆದಿಹ ಕಥೆಯನುಸುರಲು। ನೊಂದುಕೊಳು ತರಸುತಲಿ ಬಂದನು। ತಂದೆ ತಾಯ ॥ ೪ ॥ ಅರಸಿ ಕಾಡೊಳು ಸಿಕ್ಕದಿರೆ ತಾ। ಮರುಗಿದನು ವಿಧಿಯನ್ನು ದೂರುತ। ದೊರಕಿತೇತಕೆ ಕಷ್ಟವಿದ ಪರಿಹರಿಸೊ ಶಿವನೆ ॥ ೫ ॥ ಏಕೆ ಬಿಟ್ಟೆನು ಮಾತೆ ಪಿತರನ। ದೇಕೆ ವಯಸಿನ ಕಾಲದೊಳು ನಾ। ನೇಕೆ ಬಂದಿತು ಬುದ್ಧಿ ಚರಿಸಲು। ಲೋಕವನ್ನು ॥ ೬ ॥ ಎಂತು ತಾಳ್ವನೊ ಪಿತನು ಬೇನೆಯ। ನೆಂತು ಸಹಿಪಳೊ ಮಾತೆ ಕಷ್ಟವ। ನೆಂತು ಜೀವಿಸುತಿಹರೊ ವನದಲಿ। ಕಂತು ಹರನೆ ॥ ೭ ॥

ಭಾಮಿನಿ

ವೃದ್ಧ ತ್ಯಾ ತಂದೆಯರು ತನ್ನನು। ಮುದ್ದುಮಾಡುತ ಸಲಹಿದರು ತಾವ್। ವೃದ್ಧರಾಗುವ ಸಮಯಕೊದಗುವನೆಂಬ ಮಮತೆಯಲಿ॥ ಇದ್ದು ಫಲವೇನಿನ್ನು ಕಷ್ಟಕೆ। ಜಿದ್ದ ಕಾಲದೊಳವರನೆತ್ತುತ। ಲುದ್ಧರಿಸದಾದೆನೆ ನಿರರ್ಥಕವೆನ್ನ ಬಾಳುವೆಯು ॥ ೧ ॥

ನಾದನಾಮಕ್ರಿಯ - ಅಷ್ಟ

ಎಂದು ಹಂಬಲಿಸುತ್ತಲಾಗ। ತಾನು। ಬಂದನು ವನಕತಿ ಬೇಗ॥ ಹಿಂದು ಮುಂದೆಲ್ಲವ ನೋಡುತ್ತ। ತನ್ನ। ತಂದೆತಾಯಂದಿರನರಸುತ್ತ ॥೧॥ ಬಳಿಕೊಂದು ಕಡೆ ವೃಕ್ಷದಡಿಯ। ಅವ। ರ್ಕಳಿತೀರ್ಪ ಕಷ್ಟವಪರಿಯ। ಇಳೆಯರಸನು ತನ್ನ ಸತಿಯ। ಕಾಲ। ತಲೆಯಿಟ್ಟು ಮಲಗಿಹ ಸ್ಥಿತಿಯ ॥೨॥

ನೋಡಿದ ಬಾಲನಂದವರ । ಕಣ್ಣೊ । ಳ್ಮೂಡೆ ಕಂಬನಿ ಬಿಸಿಯುಸಿರ ॥ ಗಾಢದಿಂದೆಳವೃತ್ತ ಬಂದ । ತನ್ನ । ಮೂಢಮತಿಗೆ ನಾಚಿಕೊಂಡ ॥ ೩ ॥ ಅಪ್ಪಯ್ಯ ಕ್ಷಮಿಸೆನ್ನನಿಂದು । ನಾನು । ತಪ್ಪಿದೆ ದಾರಿಯನೆಂದು । ದೊಪ್ಪನೆ ಬಿದ್ದ ಪಾದದಲಿ । ಎನ್ನ । ಜೊಪ್ಪಾನೆ ತಪ್ಪಾಯ್ತೆನುತಲಿ ॥ ೪ ॥

ವಾರ್ಧಿಕ್ಯ

ಮಣಿದು ಪ್ರಾರ್ಥಿಸುತಿರುವ ಕುವರನಂ ಪಿಡಿದೆತ್ತಿ । ಜನಪನೆಂದನು ಮಗನೆ ನಿನ್ನಿಂದ ತಪ್ಪೇನು । ಎನಗೆನ್ನ ವಿಧಿವಶದಿ ದೊರಕಿತೀ ಪ್ರಾರಬ್ಧ ವಿದಕಾರು ಹೊಣೆ ಜಗದಲಿ ॥ ತನಯ ನೀನಿಷ್ಟರೊಳು ಬಂದೆನ್ನ ಸೇರ್ದುದೇ । ಘನತೋಷವಾಯ್ತೆಮಗೆ ದಿನವ ನೂಕಲಿಕಿನ್ನು । ಅನುಕೂಲನಾದೆ ನೀ ರಚಿಸು ಪರ್ಣಾಶ್ರಮವ ನೆನಲಾಗ ಸತ್ಯವಾನ ॥ ೧ ॥

ಭೈರವಿ — ಏಕ

ಕ್ಷತ್ರಿಯನಾಗಿಹೆ ತಾತ । ಋಣ । ಪುತ್ರನಂತಾಗಿಹೆ ಮಾತ ॥ ಚಿತ್ತದೊಳಟ್ಟಾಲಿಪುದು । ನಾ । ಶತ್ರುವ ಜೈಸಿದೆ ಇಹುದು ॥ ೧ ॥ ಒಳಿತೇ ಲೋಕದ ನಿಂದೆ । ನಾ । ಕಳೆಯುವುದೆಂತೈ ತಂದೆ ॥ ಕಳವಳವನು ಬಿಟ್ಟಿರಿಸಿ । ನೀವ್ । ಕಳುಹಿಸಿ ಯುದ್ಧಕೆ ಹರಸಿ ॥ ೨ ॥ ನಿಮಗೀ ವಿಧಿ ದೊರಕಿಸಿದ । ಭೂ । ರಮಣನ ಜೈಸುತ ಜಯದ ॥ ಸುಮವಾಲೆಯ ಧರಿಸುವೆನು । ನಾ । ಶ್ರಮ ಹೋಗಾಡಿಸದಿರೆನು ॥ ೩ ॥ ಎಂದೆನೆ ಕೇಳುತ ಶೋಕ । ದಿಂ । ದೆಂದನು ಮಗನಿಗೆ ಲೋಕ ॥ ನಿಂದಿಪ ತೆರನೆನಗುವೆಯ । ಇದು । ಚಂದವೆ ನೋಡೀ ಪರಿಯ ॥ ೪ ॥ ಯಾರಿಹರಿನ್ನೆಮಗೆಲ್ಲ । ಪಾ । ತಾರರು ಕೇಳೈ ಸೊಲ್ಲ ॥ ವೀರನೆ ನಿನ್ನಯ ಶೌರ್ಯ । ಇದು । ತೋರಲು ಅಲ್ಲವು ಸಮಯ ॥ ೫ ॥ ಜನನಿಯ ವಯಸನು ನೋಡು । ಎನ್ನ । ಕಣ್ಗಳು ಪೋಗಿಹ ಪಾಡು ॥ ವನ ಮೃಗ ಬಗೆಯದೆ ಕೇಡ । ಮುದ್ದು । ತನಯನೆ ಈ ಛಲ ಬೇಡ ॥ ೬ ॥

ಭಾಮಿನಿ

ಈ ಪರಿಯೊಳಾ ವೃದ್ಧನಾಗಿಹ । ಭೂಪನರುಹಲು ಕೇಳಿ ಮನದಲಿ । ತಾಪವನು ಬಡುತಾಗ ರಚಿಸುತ ಪರ್ಣ ಮಂದಿರವ ॥ ಆ ಪರಾತ್ಪರ

ವಸ್ತುವನು ಪೂ । ಜೋಪಚಾರದೊಳರ್ಚಿಸುತ್ತಲಿ । ತಾಪಸರ ತೆರ ದಿನವ ಕಳೆಯುತಲೀರ್ದರಡವಿಯುಲಿ ॥ ೧ ॥

ಮಧ್ಯಮಾವತಿ - ತ್ರಿವುಡೆ

ಸತ್ಯಭಾಮೆಯೆ ಕೇಳು ಮಾದ್ರಾ । ಪೃಥ್ವಿಪತಿಯೊಂದಿನದೊಳೋಲಗ । ವಿತ್ತನಳಕಾವತಿಯ ಸೊಬಗಿಂ । ಹತ್ತು ಮಡಿ ವೈಭವದಲಿ । ಅಶ್ವಪತಿಯು ॥ ೧ ॥ ಇಂತು ವಿಭವದೊಳೋಲಗದಿ ಭೂ । ಕಾಂತನೊಪ್ಪಿರೆ ಬಂದಳಲ್ಲಿಗೆ । ಕಂತು ಸನ್ನಿಭ ವದನೆ ಸದುಗುಣ । ವಂತೆಯಾ ಸಾವಿತ್ರಿಯು । ಪಿತನ ಬಳಿಗೆ ॥ ೨ ॥ ಬಂದು ಭಕ್ತಿಯೊಳ್ಪದಕೆ ಮಣಿದಿಹ । ನಂದನೆಯ ಪಿಡಿದೆತ್ತಿ ಮುದ್ದಿಸು । ತೆಂದನಾ ಭಾಮಿನಿಗೆ ಪೊಡವಿಪ । ಮಂದಹಾಸವ ಬೀರುತ । ಚಂದದಿಂದ ॥ ೩ ॥ ಕೇಳು ಮುದ್ದಿನ ಕಣಿಯೆ ಸದುಗುಣ । ಶೀಲೆ ಸೊಬಗಿನ ಮಣಿಯೆ ನಿನ್ನೊಳು । ಪೇಳ್ವೆ ಭಾಗ್ಯದ ಗನಿಯೆ ಮುಂದಿನ । ಬಾಳುವೆಯ ಸ್ಥಿತಿಗತಿಯನು । ವಿವರವಾಗಿ ॥ ೪ ॥ ಪರಿಜನರ ಕೂಡುತಲಿ ನೀನಿದು । ವರೆಗೆ ಆಡುತ ಕಳೆದೆ ದಿನವನು । ಹರಿಣಲೋಚನೆ ಇನ್ನು ಮುಂದಾ । ಪರಿಯು ಸಲ್ಲದು ಕೇಳಿಲೆ । ಮಗಳೆ ನೀನು ॥ ೫ ॥ ಮಂದಗಜಗಾಮಿನಿಯೆ ಪೊರೆವನು । ತಂದೆ ಬಾಲ್ಯದಿ ಸುತೆಯ ಯೌವನ । ಹೊಂದೆ ಪತಿಪಾಲಿಪನು ಮುದಿತನ । ಕಂದರಂಕೆಯೊಳ್ಕಳೆವುದು । ಎನುತಲಿಹುದು ॥ ೬ ॥ ಇದು ಜಗತ್ತಿನ ನಿಯಮವದರಿಂ । ವಿಧುಮುಖಿಯೆ ಸಂಪ್ರಾಪ್ತ ಜೌವನ । ಸುದತಿ ನೀನಾಗಿರುವ ಕಾರಣ । ಮದುವೆ ಮಾಡುವೆ ಶೀಘ್ರದಿ । ನಿನಗೆ ನಾನು ॥ ೭ ॥ ಇದು ತನಕ ಪಾಲಿಸಿದೆ ಮುಂದಕೆ । ಸದಯನನು ಕೂಡುತ್ತ ವಿನಯದಿ । ಹೃದಯದೊಲ್ಲಭನನ್ನು ಮೆಚ್ಚಿಸಿ । ಮುದದಿ ನೀ ಪಡೆ ಮಕ್ಕಳ । ಸುಗುಣರನ್ನೆ ॥ ೮ ॥

ಕಂದ ಪದ್ಯ

ಕೇಳುತ ಜನಕನ ನುಡಿಯಂ । ತಾಳಿದು ಲಜ್ಜೆಯ ಪಿತನೊಡನೀ ಪರಿಯಿಂದಂ ॥ ಪೇಳಿದಳಣುಗೆಯು ನಮಿಸುತ । ಕೇಳುವುದೆನ್ನಯ ಬಿನ್ನಪವಿದನೊಂದೆನುತಂ ॥ ೧ ॥

ಮಧುಮಾಧವಿ – ಏಕ

ಲಾಲಿಸು ಜನಕನೆ ಬಾಲೆಯ ನುಡಿಯ । ಪೇಳುವೆ ನಿನ್ನೊಳು ಮನಸಿನ ಪರಿಯ ॥ ಪ ॥ ವನವಿಹರಿಸುವೆನೆಂದೆನುತಲಿ ನಿನ್ನ । ಅನುಮತಿ ಯನು ಪಡೆದೈದಿದೆನೆನ್ನ ॥ ಮನಸಿಗಾದಾನಂದವೇನೆಂಬೆ ಜನಕ । ವನದ ಸಂಭ್ರಮವ ಕಂಡಿಲ್ಲವೀ ತನಕ ॥ ಲಾ ॥ ೧ ॥ ಅಲ್ಲಲ್ಲಿ ಮೃಗಗಳೋಡಾ ಡುವ ಆಟ । ಅಲ್ಲಲ್ಲಿ ಪಕ್ಷಿಗಳ್ನೋಡುವ ನೋಟ ॥ ಅಲ್ಲಲ್ಲಿ ಮುನಿಗಳು ಕೂಡುವ ಕೂಟ । ಅಲ್ಲಲ್ಲಿ ಕೇಳ್ವುದವರ ವೇದ ಪಾಠ ॥ ಲಾ ॥ ೨ ॥ ಪ್ರಕೃತಿ ಸೌಂದರ್ಯವ ಕಂಡೆನಾ ಬನದಿ । ಸುಕೃತವಿದ್ದುದರಿಂದ ದೊರಕಿತಾ ದಿನದಿ ॥ ಸುಖಿಯಾದೆನಪ್ಪಯ್ಯ ಕಂಡದನೆಲ್ಲ । ಸುಖ ಕಂಡೆ ವನದೊಳು ಪೇಳ್ವೆ ಸುಳ್ಳಲ್ಲ ॥ ಲಾ ॥ ೩ ॥ ಪ್ರಾಪ್ತ ಜೌವನೆಯಾದೆನದರಿಂದಲೆನಗೆ । ಪ್ರೀತನ ಮಾಡಲು ಬೇಕೆಂಬ ಬಗೆಗೆ ॥ ಮಾತೊಂದನರುಹುವೆ ದಯ ವಿಟ್ಟಾಲಿಪುದು । ಜಾತಿಯ ರೀತಿಯ ತಪ್ಪ ಮನ್ನಿಪುದು ॥ ಲಾ ॥ ೪ ॥ ನೋಡಿದೆ ವನದೊಳಗೋರ್ವ ಚೆನ್ನಿಗನ । ಮೂಡುವ ರವಿಯಂತೆ ಬೆಳಗುತ್ತಲಿಹನ ॥ ನೋಡಲೋಡಿತು ಕಂಗಳಾ ಶೋಭಾಮಯನ । ಮೂಡಿತು ಪ್ರೇಮವು ವರಿಸಲೆಂದವನ ॥ ಲಾ ॥ ೫ ॥ ಹೃದಯದ ಸ್ಥಾನವು ತುಂಬಲು ಬಹುದು । ಕದವ ತೆರೆದು ಸ್ವಾಗತ ಬಯಸುವುದು ॥ ಮದುವೆ ಮಾಡುವ ಮನವಿದ್ದರಾತನಿಗೆ । ವಧುವಾಗಿ ಮಾಡೆನ್ನ ನಮಿಸುವೆನಡಿಗೆ ॥ ಲಾ ॥ ೬ ॥

ಸಾಂಗತ್ಯ – ರೂಪಕ

ಅಡಿಗೆರಗಿದ ಮೋಹ । ದಣುಗೆಯ ಪಿಡಿದೆತ್ತಿ । ಪೊಡವಿ ಪಾಲಕ ನೆಂದನಾಗ ॥ ಅಡವಿಯೊಳಗೆ ನೀನು । ನೋಡಿದರ್ಭಕನಮ್ಮ । ಬಿಡದಿರು ಪ್ರೇಮದ ಮಗಳೆ ॥ ೧ ॥ ಕ್ಷತ್ರಿಯ ಕುಲವಲಿ ಕೀರ್ತಿಯ ಧರಿಸುತ್ತ । ಧಾತ್ರಿಯ ನೀವರೆಗಾಳ್ದೆ ॥ ಪುತ್ರಿಯ ತಾಪಸ । ಪುತ್ರಗಿತ್ತನು ಎಂದು । ಪೃಥ್ವಿಯ ಜನರಾಡದಿಹರೆ ॥ ೨ ॥ ಲೋಕಾಪವಾದವ । ಕಳೆಯಲು ಸಾಧ್ಯವೆ । ಲ್ಲಾಕಡೆ ಮನವಿಡಬೇಡ ॥ ಸಾಕಾರನಾಗಿಹ । ವರನ ಹುಡುಕಿ ನಿನ । ಗೀಕಜ್ಜ ಮಾಡಲಿಕಿರುವೆ ॥ ೩ ॥

ಕಾಂಬೋಧಿ - ಝಂಪೆ

ಎಂದೆನಲಿಕಾಗ ನೃಪ । ನಂದನೆಯು ಪೇಳಿದಳು । ತಂದೆಯೊಡನತಿ ಹರುಷದಿಂದ ॥ ನೊಂದುಕೊಳಬೇಡ ನೀ । ನೆಂದ ನುಡಿಯರಿತೆ ನಾ । ತಂದಪೆನೆ ಅಪಕೀರ್ತಿ ಕುಲಕೆ ॥ ೧ ॥ ಧರೆಯೊಳಗೆ ಸಾಲ್ವ ಪುರ । ವರವ ಪಾಲಿಸುತಿಪ್ಪ । ಧೊರೆ ದ್ಯುಮತ್ಸೇನಕನ ತರಳ ॥ ಧರೆಯು ಸಂಚರಿಸಲವ । ತೆರಳಿರುವ ಸಮಯವರಿ । ತರಿನೃಪರು ಮುತ್ತುತಲಿ ಪುರವ ॥ ೨ ॥ ಧುರದಿ ಸೋಲಿಸಿ ನೃಪನ । ತರುಣಿ ಸಹಿತಲಿ ಕಾಡೊ । ಳಿರಿಸುತಂಧನ ಮಾಡಿ ಪೋಗೆ ॥ ಪುರಜನಗಳಾಡುತಿಹ । ಪರಿಯರಿತು ಚಿತ್ರಾಶ್ವ । ತಿರುಗಿ ಬಂದವರ ನೋಡುತಲಿ ॥ ೩ ॥ ಮರುಗುತಿಹ ತ್ಯಾತಂದೆ । ಯರಿಗೆ ಧೈರ್ಯವ ಪೇಳು । ತರಿ ನೃಪರ ಗೆಲುವೆನೆಂದೆನುತ ॥ ಪೊರಡಲಿಹ ಬಾಲನನು । ಧರಣೀಶ ಸಂತೈಸಿ । ಇರುತಿಹರು ಮೂವರಾ ಬನದಿ ॥ ೪ ॥

ಭಾಮಿನಿ

ಜನಕ ಕೇಳದರಿಂದಲೆನ್ನನು । ಜನಪ ಖುಷಿಯಾತ್ಮಜಗೆ ಮದುವೆಯ । ಮನ ಮುದದೊಳೆಸಗುತ್ತಲೀಯಲು ಮನದೊಳಗೆ ಸುಖದಿ ॥ ಇನಿಯನನು ಕೂಡುತ್ತಲಿಹೆನೆಂ । ಬಣುಗೆಯಳ ನುಡಿಕೇಳಿ ತೋಷದೊಳನುಮತಿಯನೀಯಲ್ಕೆ ಸುರಮುನಿ ಬಂದನಂಬರದಿ ॥ ೧ ॥

ಸಾಂಗತ್ಯ - ರೂಪಕ

ಅಂಬರದಿಂ ಸೂರ್ಯ । ಬಿಂಬವು ಧರಣಿಗೆ । ಸಂಭ್ರಮದಿಂದೈದಿ ಬಹುದೊ ॥ ಎಂಬಂತೆ ಶೋಭಿಪ । ಕಂಬು ಗೋಲನ ಪಿತ । ಸಂಭವ ಸುತನೈದಿ ಬಂದ ॥ ೧ ॥ ಕರದೊಳು ವೀಣೆಯ । ಧರಿಸಿ ಹಂಸೆಯನೇರಿ । ಬರುತಿಹ ಮುನಿಯ ದೂರದಲಿ ॥ ಪರಿಕಿಸಿ ಜನಪಾಲ । ಕರ ತಂದಾಸನವೀಯು । ತೆರಗಿದ ಪದದಿ ಭಕ್ತಿಯೊಳು ॥ ೨ ॥ ಮೂರು ಲೋಕವನು ಸಂ । ಚಾರ ಮಾಡುವ ಸುರ । ವಾರ ವಂದಿತ ಮೌನಿವರನೆ ॥ ಭೂರಿ ಸಂತಸವ್ಯಾತೆ । ನ್ನೂರ ಸೇರ್ದುದರಿಂದ । ಬೇರೆ ವಿಶೇಷವೇನಿಹುದು ॥ ೩ ॥

ಕಾಪಿ - ಅಷ್ಟ

ಕೇಳಯ್ಯ ಮಾದ್ರಾವನೀನಾಥ ನುಡಿಯ । ಪೇಳುವೆ ನಿನ್ನೊಳು

ಬಂದ ಸಂಗತಿಯು ॥ ಬಾಲಕರಿಲ್ಲದೆ ಬಳಲುವ ಸಮಯ । ಪೇಳಿದೆ ನಿನಗೆ ಸಂತತಿಯುಹ ಬಗೆಯ ॥ ೧ ॥ ಏನಾಯಿತೆಂಬುದನರಿಯಬೇಕೆನುತ । ಮಾನವಾಧಿಪ ಬಂದೆ ತಪವಾಚರಿಸುತ ॥ ದೀನನಾಥೆಯನೊಲಿಸಿದೆಯೊ ಪೇಳರಸ । ಸೂನುವ ಪಡೆದು ನೀ ತಳೆದೆಯೊ ಹರುಷ ॥ ೨ ॥ ದೇವ ಮೌನಿಪ ಕೇಳಿ ತೆರಳುತ್ತ ವನವ । ನೀವೆಂದ ತೆರದೊಳಗೆಸಗುತ್ತ ತಪವ ॥ ದೇವಿಯನೊಲಿಸುತ್ತ ಕೇಳಿದೆ ವರವ । ಭೂವರ ನಿನಗಾಹಳಾತ್ಮಜೆಯೆನುವ ॥ ೩ ॥ ವರವಿತ್ತು ತೆರಳಿದಳಾ ಜಗಜ್ಜನನಿ । ಹರುಷವಿಂದ್ಯೈತಂದ ಮೇಲೆನ್ನ ತರುಣಿ ॥ ಧರಿಸಿ ಗರ್ಭವ ಪಡೆದಳು ಮುದ್ದುಸುತೆಯು । ಇರುವಳಿಲ್ಲಿಯೆ ನೋಡಿ ಕುಳಿತೆನ್ನ ಬಳಿಯು ॥ ೪ ॥ ಹದಿನಾಲ್ಕು ವರುಷವ್ಯಾತದರಿಂದಲಿನ್ನು । ಮದುವೆಯು ಮಾಡಲು ಬೇಕೆನ್ನುತಾನು ॥ ವಿಧುಮುಖಿ ಗರುಹಲು ಆವಳೆಂದ ಪರಿಯು । ತ್ರಿದಶವಂದಿತ ಮುನಿ ಪೇಳುವೆನಯ್ಯ ॥ ೫ ॥ ನೋಡಿಹಳಂತೆ ವನದೊಳಗೋರ್ವ ಕುವರ । ರೂಢೀಶ ಸುತನೆಂದು ಪೇಳ್ದಳಾ ವಿವರ ॥ ಮಾಡಬೇಕಂತಾತನಿಗೆ ವಧುವಾಗಿ । ಜೊತೆಯಾಗಿರುವಳಂತೆ ಕಾಡೊಳು ಪೋಗಿ ॥ ೬ ॥ ಪುಟ್ಟಿಲ್ಲವೆಮ್ಮಯ ಬಸುರೊಳು ತರಳ । ಪಟ್ಟವಾಳುವರಿಲ್ಲದ್ಯಾತೆನ್ನ ಮಗಳ ॥ ಕೊಟ್ಟು ಲಗ್ನವ ಮಾಳ್ಪೆ ಸತ್ಯವಾನನಿಗೆ । ಕಟ್ಟುವೆ ಪಟ್ಟವ ನೀ ರಾಜ್ಯಸಿರಿಗೆ ॥ ೭ ॥

ಭಾಮಿನಿ

ತ್ರಿದಶ ವಂದಿತ ಮುನಿಯೆ ಕೇ । ಳಭ್ಯುದಯುವಾಗಲಿ ವಂಶವದರಿಂ । ಸುದತಿಯನು ನಾನೀವೆ ಧಾರೆಯನೆರೆದುತೋಷದಲಿ ॥ ಮದುವೆ ಸಮಯದೊಳ್ಳೈ ತನುತ ನೀವ್ । ವಧುವರರ ಹರಸಲ್ಕೆ ನಾನತಿ । ಮುದವ ತಳೆವೆನು ನಿಮ್ಮ ಕೃಪೆಯಿಂದಾದುದಿದು ಮುನಿಪ ॥ ೧ ॥

ಬಿಲಹರಿ — ಅಷ್ಟ

ಕೇಳುತ್ತ ನೃಪನೆಂದ ಮಾತ । ಮೌನಿ ಪೇಳಿದನರಸಗಿಂತೆನುತ ॥ ಬಾಲೆಯು ಮನದೊಳ । ಗಾಲೋಚಿಸುತಿಹ । ಬಾಲ ಸುಂದರ ಶೀಲಯುತ ಭೂ । ಲೋಲ ದ್ಯುಮತ್ಸೇನಕನ ತರಳನು ॥ ಕೇ ॥ ೧ ॥ ಮಾರನಿಗೆಣೆಯುಹ ಕುವರ । ಸುಕು । ಮಾರಿಗೆ ಸರಿಯುಹಧೀರ ॥ ಧಾರುಣೀಶ್ವರ

ಕೇಳು । ಭೂರಿ ಶೃಂಗಾರದಿ । ಧೀರ ಮನ್ಮಥ ರತಿಯಂದದಿ । ತೋರ ಬಹುದೈ ನಾರಿ ಪುರುಷರು ॥ ೨ ॥ ಆದರೊಂದುಂಟಯ್ಯ ಕೊರತೆ । ಮಾದ್ರ । ಮೇಧಿನೀಶನೆ ಕೇಳೆ ಮರೆತೆ ॥ ಆ ದಿವ್ಯ ಸುಂದರ । ನಾದ ಬಾಲನು ಲಗ್ನ । ವಾದ ವತ್ಸರದಲ್ಲಿ ಮರಣವ । ನೈದವನು ಅಲ್ಪಾಯು ತರಳನು ॥ ೩ ॥

ಭೈರವಿ - ಝಂಪೆ

ಎಂದೆನಲು ಭೂಪತಿ । ಕಂದಿ ಮನದಲಿ ಬಹಳ । ಇಂದುಮುಖಿ ಸಾವಿತ್ರಿ । ಗೆಂದ ಖೇದದಲಿ ॥ ೧ ॥ ಕೇಳಿದೆಯ ಮಗಳೆ ಮುನಿ । ಪಾಲ ರೆಂದಿಹ ಮಾತ । ಬಾಲನಲ್ಪಾಯುವೆಂ । ಬಾಲೋಚನೆಯನು ॥ ೨ ॥ ಮದುವೆ ಕಳೆದೊಂದೊತ್ಸ । ರದಿ ಮರಣಬಹುದಂತೆ । ವಿಧವೆಯಾಗುವ ಯೋಗ । ವಿಧುಮುಖಿಯೆ ತ್ಯಜಿಸು ॥ ೩ ॥ ಬೇಡ ಮಗಳೇ ನಿನಗೆ । ಕಾಡ ತರುಣನು ಬೇರೆ । ಭೂಧೀಶ ಕುವರನನು । ನೋಡಿ ಮದುವೆ ಯನು ॥ ೪ ॥ ಮಾಡುವೆನು ಬರಿದೆ ಎದು । ರಾಡದಿರು ಅದರಿಂದ । ಕೇಡು ತಪ್ಪದು ಮರುಗ । ಬೇಡ ಮರೆಯುವನ ॥ ೫ ॥ ಎನಲೆಂದ ನಾರ ದನು । ವನಿತೆ ಕೇಳಲ್ಪಾಯು । ತನಯ ಚಿತ್ರಾಶ್ವನದ । ಕನುಮಾನ ಬೇಡ ॥ ೬ ॥ ನಾರಿಯುದರಿಂದ ಸುಕು । ಮಾರನನು ಮರೆ ಹೃದಯ । ಸಾರ ಬೇಡವಗೆ ಮನ । ಬೇರೆ ಕಡೆಗಿರಿಸು ॥ ೭ ॥ ನಿನ್ನ ಪಿತನೆಂದ ತೆರ । ನಿನ್ನೋರ್ವನನು ವರಿಸು । ತುನ್ನತಿಯ ಪಡೆ ಜಗದಿ । ಕನ್ನೆ ಗುಣರನ್ನೆ ॥ ೮ ॥ ಕೇಳಿ ಜನಕನು ಮೌನಿ । ಪಾಲರೆಂದಿಹ ಮಾತ । ಬಾಲೆ ಕಡೆಗಿಂ ತೆಂದ । ಳಾಲೋಚಿಸುತಲಿ ॥ ೯ ॥

ನವರೋಜು - ಏಕ

ಕೇಳಿರೆನ್ನಯ ಮಾತ । ಮುನಿ । ಪಾಲ ತಂದೆ ಸಮೇತ ॥ ಬಾಲಕ ನೋತ್ಸರ । ಕಾಲದಿ ಮರಣವ । ತಾಳುವನದರಿಂ । ಬಾಳುವೆಗೆಡವುದು ॥ ಕೇ ॥ ೧ ॥ ಆದರಿಂದಲವನನ್ನು । ಮರೆ । ವುದು ಬೇರೆ ವರನನ್ನು ॥ ಮದುವೆಯಾಗುವುದೆಂ । ಬುದು ಸರಿಯೇ ಸತಿ । ಹೃದಯವನರಿಯದೆ ವಿಧಿಸುವಿರೇಸರಿ ॥ ೨ ॥ ಚಿತ್ತದೊಳು ಚಿತ್ರಾಶ್ವ । ನೆಲೆ । ನಿತ್ತಿಹನು

ಸರ್ವಸ್ವ ॥ ಕಿತ್ತಿಹನೆನ್ನಯ ; ಚಿತ್ತವ ಬಾಲಕಿ । ಯುತ್ತರ ಪೇಳ್ದಳೆ । ನುತ್ತ ಮುನಿಯುದಿರಿ ॥ ೩ ॥

ಭಾಮಿನಿ

ಮಗಳ ಮಾತನು ಕೇಳ್ದು ಜನಪತಿ । ಮಗುಡ ಮಾನಸನಾಗಿ ಮುನಿಪನ । ಮೊಗವ ನೀಕ್ಷಿಸಿ ಪೇಳ್ದನಿಳೆಯಾಣ್ಮನೊಳು ನಸು ನಗುತ ॥ ಮಗುಡ ಜೇಡ್ಯೆ ಮುಂದೆ ಸಾಲುವ । ನಗರದಧಿಪನಸುತಗೆ ನಿನ್ನಯ । ಮಗಳ ಧಾರೆಯನೆರೆಯುವುದು ಸಂತಸದಿ ಕೇಳ್ಬಳಿಕ ॥ ೧ ॥

ಕೇತಾರಗೌಳ - ಅಪ್ಪ

ನಾರಿಯ ಹೃದಯವ । ಸೂರೆಗೊಂಡಿಹ ಸುಕು । ಮಾರ ಚಿತ್ರಾಶ್ವ ತಾನು ॥ ನೀರೆಯ ಮನಸಿನ ; ಆರಾಧ್ಯ ದೇವತೆ । ಯಾ ರಾಜ ನಂದನನು ॥ ೧ ॥ ಹೃದಯದ ನೆಲೆಯನು । ಬದಲಿಸಲರಿಯರು । ಸುದತಿಯರನ್ಯರಿಗೆ ॥ ಬೆದರದೆ ಮಗಳಿಗೆ । ಮದುವೆಯ ಮಾಡೆಂದು । ವಿಧು ಮುಖಿ ಯೊಡನೆಂದನು ॥ ೨ ॥ ಸಾವಿತ್ರಿ ಕೇಳ್ವಟ । ಸಾವಿತ್ರಿಯನ್ನೀಕ್ಷೋ । ಭಾವದಿಂದರ್ಚಿಸುತ ॥ ದೇವಿಯೊಡನೆ ನಿನ್ನ । ಜೀವಿತೇಶನ ಪ್ರಾಣ । ಕಾವಂತೆ ಪ್ರಾರ್ಥಿಸಮ್ಮ ॥ ೩ ॥ ನುಂಗಲವಹುದೆಂದು । ಮಂಗಲಮೂರ್ತಿ ಮಾ । ತಂಗ ವರದ ಶ್ರೀಹರಿ ॥ ರಂಗನೆನ್ನುತ ಸರ್ವ । ಸಂಗ ವರ್ಜಿತ ಮುನಿ ಪುಂಗವ ನಡೆದನಾಗ ॥ ೪ ॥

ವಾರ್ಧಿಕ್ಯ

ಮುನಿಪಾಲನಿಂತರುಹಿ ತೆರಳಲ್ಕೆ ಧರಣಿಪತಿ । ತನುಜೆಯುಳ ವೈವಾಹದಣಿಯ ಮಾಡುತ ಮುಂದೆ । ವನಕೆ ತೆರಳಲು ಸಕಲ ಸನ್ನಾಹ ದೊಡನೆ ಸುಕುಮಾರಿಯಂ ಕೂಡಿ ಕೊಂಡು ॥ ಜನಪ ಋಷಿಯಹ ದ್ಯುಮತ್ಸೇನಕನ ಬಳಿಗೈದಿ । ತನುಜೆಯುಳ ನೀವೆ ನಿನ್ನಣುಗನಿಗೆ ಎನಲಾಗ । ಮನದಿ ಲಜ್ಜಿತನಾಗಿ ಕಣುಗಳಿಲ್ಲದ ನೃಪತಿಯುಶ್ವಪತಿಗಿಂತೆಂದನು ॥ ೧ ॥

ಸಾಂಗತ್ಯ - ರೂಪಕ

ಏನಯ್ಯ ಮಾದ್ರ ನಿತಾನದೊಡೆಯನೆನ್ನ । ಸೂನು ಚಿತ್ರಾಶ್ವಗೆ

ಮಗಳ ॥ ತಾನೀವೆನೆಂಬೆಯ । ಸ್ಥಾನ ಭ್ರಷ್ಟನ ಕಂಡು । ಮಾನವಾಧಿಪ ತರವೇನೈ ॥ ೧ ॥ ದೇಶಕೋಶಗಳಿಲ್ಲ । ವಾನಿ ಸಂಘಗಳಿಲ್ಲ । ವಾಸವಾರಣ್ಯ ದೊಳಿಹುದು ॥ ಈಶ ಸೇವೆಯೊಳ್ತನು । ಪೋಷಿಸುತಿಹೆವಿನ । ರೇಶ ಕೇಳ ನ್ನಣುಗಸಿಗೆ ॥ ೨ ॥ ದೊರೆ ಕುವರಿಯು ತಂದು । ವಿರಚಿಸೆ ವೈವಾಹ । ಪೊರೆಯುವುದೆಂತಯ್ಯ ಹೇಳು ॥ ಧರಣೀಶ ಕೇಳ್ನಿನ್ನ ಕರುಣವಿದ್ದರೆ ಸಾಕು । ತರಳಗೆ ಬೇಡೀಗ ಮದುವೆ ॥ ೩ ॥ ಎಂದೆನೆವಾದ್ರೀಶ । ನೆಂದನು ನಿನ್ನಯ । ನಂದನನನು ಹೊರತನ್ಯ ॥ ಸುಂದರನೆನಗೆ ಬೇ । ಡೆಂದೆನೆ ಸುಕುಮಾರಿ । ಬಂದೆ ನಿನ್ನಯ ಬಳಿಗಾಗಿ ॥ ೪ ॥ ಧಾರುಣಿ ಪತಿ ಕೇಳು । ಕಾರಡವಿಯೊಳ್ತನ್ನ । ನೀರನೊಡನೆ ಸುಖದಿಂದ ॥ ನಾರಿ ಇರುವಳಂತೆ । ಧಾರೆಯನೆರೆವೆನು । ಧೀರ ಚಿತ್ರಾಶ್ವಗೀ ದಿನದಿ ॥ ೫ ॥ ಇದಕಿಲ್ಲ ಸಂದೇಹ । ಬೆದರಬೇಡೆಂದಾಗ । ಸುದತಿ ಚಿತ್ರಾಶ್ವರಿಗೊಡನೆ ॥ ಮದುವೆಯ ಶಾಸ್ತ್ರದ । ವಿಧಿಯಂತೆ ಮಾಡುತ್ತ । ಮದುವಣಿಗರ ಹರಸಿದನು ॥ ೬ ॥

ಭಾಮಿನಿ

ಇಂತು ನೃಪ ತನ್ನಣುಗೆಯುಳ ಭೂ । ಕಾಂತ ಸುತಗೊಪ್ಪಿಸುತ ತೆರಳಲು । ಕಾಂತೆ ತನ್ನಯ ಅತ್ತೆ ಮಾವಂದಿರನು ಪತಿಯೊಡನೆ ॥ ಸಂತ ಸದಿ ಸೇವಿಸುತ ಮನಸಿಗೆ । ಸಂತಸವ ಬೀರುತ್ತ ದೇವಿಯು । ಸಂತರಂಗದಿ ಭಜಿಸುತಿದ್ದಳು ಪತಿಯ ಪಾಲಿಸಲು ॥ ೧ ॥

ಸೌರಾಷ್ಟ್ರ — ತ್ರಿವುಡೆ

ಇತ್ತ ಸುರಪುರದಲ್ಲಿ ಜೈಮಿನಿ । ಪತ್ತಣದಿ ಯಮರಾಯನೋಲಗ । ವಿತ್ತು ಕರೆದಿಂತೆಂದ ತನ್ನಯ । ಭೃತ್ಯರೊಡನೆ ॥ ೧ ॥ ಧರೆಯೊಳಗೆ ಪುಣ್ಯಾತ್ಮರೆನ್ನಿಸಿ । ಮೆರೆದುಕೊಂಡಿಹ ಸಾಧುಗಳ ನಾ ಕರೆತರಿಸಿ ಕಳು ಹಲ್ಕೆ ಬೇಕೈ । ಸುರಪುರಕ್ಕೆ ॥ ೨ ॥ ಪಾಪಕರ್ಮವನೆಸಗುತಿಹ ಕಡು । ಪಾಪಿಗಳನೆಳೆತಂದು ನರಕದ । ಕೂಪದೊಳು ತಳ್ಳೆಂಬ ನೇಮವು । ಶ್ರೀಪತಿಯದು ॥ ೩ ॥ ಇದುವರೆಗೆ ಪಾಲಿಸುತ ಬರುತಿಹೆ । ನದರನೀದಿನ ನಮ್ಮ ನರಕದ । ಕದವ ಪೊಗುವವರಿದ್ದರೀಕ್ಷಣ । ವಿದಿರು ತನ್ನಿ ॥ ೪ ॥ ಎಂದೆನಲು ಯಮ ದೂತರಾಗಲೆ । ತಂದು ನಿಲಿಸಲು ಪಾಪ ಪುಣ್ಯದ । ಬಂಧನದಿ ಬಿಗಿವಡೆದ ಕೆಲವಾ । ಮರ್ಂದಿಗಳನು ॥ ೫ ॥ ಕೇಳುತೆಲ್ಲರ

ಪಾಪ ಪುಣ್ಯವ । ಖೂಳರಿಗೆ ಬಗೆ ಬಗೆಯ ಶಿಕ್ಷೆಯ । ಪೇಳಿ ಪುಣ್ಯಾತ್ಮರ
ಸ್ವರ್ಗದಿ । ಬಾಳಿರೆಂದ ॥ ೬ ॥ ಸುರಪುರಕೆ ಕಳುಹಿಸುತಲವರನು । ಕರೆದು
ಪೇಳಿದ ಚಿತ್ರಗುಪ್ತರ । ಪರಿಕಿಸಲು ಬೇಕೆಂದು ಸಮ್ಮ್ರಯ । ಪ್ರಕೆ
ಬರುವ ॥ ೭ ॥ ನರಮನುಜರಾರಿಹರು ಎಂಬುದ । ನರಿಯ ಬೇಕೆನಲೆಂದ
ರಾತಗೆ । ಧೊರೆಕುವರ ಚಿತ್ರಾಶ್ವಸೋರ್ಮನು । ಬರಲಿಕಿರುವ ॥ ೮ ॥
ಸಾರಸಜ ಬರೆದಿರುವ ರೇಖೆಯು । ತೀರಿತೆಂದಿಗೆನಲ್ಕೆ ಬಂದನು । ಶ್ರೀ
ರಮಾಧವನನ್ನು ನೆನೆಯುತ । ನಾರದಾಂಕ ॥ ೯ ॥

ಕೇತಾರಗೌಳ — ಅಷ್ಟ

ದೇವ ಮೌನಿಪ ಬಹ । ಸೋವ ತಿಳಿದು ಯಮ । ದೇವ ಸಂತೋಷ
ದಿಂದ ॥ ಧಾವಿಸುತಿದಿಗೊಂಡು । ಪಾವನನನು ಭಕ್ತಿ । ಭಾವದಿಂ ಕರೆ
ತರುತ ॥ ೧ ॥ ರಾಜಿಪ ಯತಿಪಾದ । ಪೂಜಿಸುತಲಿ ಯಮ । ರಾಜ
ನಿಂತೆಂದನಾಗ ॥ ಮೂಜಗ ಚರಿಪ ಸ । ರೋಜ ಸಂಭವ ಸುತ । ಸೋಜಿಗ
ಬಂದುದಿಲ್ಲಿ ॥ ೨ ॥ ಎನಲೆಂದ ನಾರದ । ಮುನಿಪನು ದಿನಪನ । ತನಯ
ನೊಡನೆ ನಗುತ ॥ ಜನಪ ದ್ಯುಮತ್ಸೇನ । ತನಯನ ತರಲೇನು । ತಡೆ
ಮಾಡುತಿರುವೆ ಏಕೆ ॥ ೩ ॥ ಎನಯ್ಯ ಯಮಧರ್ಮ । ಮಾನವಾಧಿಪ
ಸುತ । ನೇನು ಕರ್ಮವಗೈದಿಹ ॥ ನೀನಿಂದು ತರೆ ಸತ್ಯ । ವಾನನನಿಲ್ಲಿಗೆ ।
ಪ್ರಾಣ ತೊರೆವಳ್ಸತಿಯು ॥ ೪ ॥ ಪತಿಯು ಬಿಟ್ಟನ್ಯತ್ರ । ಗತಿಯಿಲ್ಲವೆನುತ
ಲಾ । ಸತಿ ಪೂಜಿಸುತಲಿಹಳು ಜತೆ ತೊಲಗಿಸುತಾಕೆ । ಪತಿಯು ಜೀವವ
ತರೆ । ಸತಿ ಧರ್ಮ ಉಳಿವುದೆಂತು ॥ ೫ ॥

ಕೇತಾರ ಗೌಳ — ಝಂಪೆ

ತ್ರಿದಶವಂದಿತ ಮುನಿಪರೆ । ನೀವಿಂತು । ಸುದತಿಗೋಸುಗ ಪೇಳ್ವರೆ ॥
ವಿಧಿ ನಿಯಮಕನು ಸರಿಸುತ । ಬರುತಿಹರು । ವಿಧಿಸಿದವಧಿಯ ಮುಗಿ
ಸುತ ॥ ೧ ॥ ಸತಿಧರ್ಮ ಉಳಿಸಲೆಂತು । ನಾನವಳ । ಪತಿಯನ್ನು ಬಿಡು
ವುದೆಂತು ॥ ಕ್ಷಿತಿಯೊಳೀವರೆಗೆಲ್ಲಿಯು । ನಡೆದಿಹುದೆ । ಯತಿಪ ಪೇಳೀ
ರೀತಿಯು ॥ ೨ ॥ ಕನ್ನೆ ಪತಿ ಶೂನ್ಯಳಾಗೆ । ಎನಗೇನು । ನಿನ್ನ ಪಿತ
ಬರೆದ ಹಾಗೆ ॥ ಎನ್ನಲ್ಲಿ ಬರಲಿಕಿರುವ । ಪ್ರಾಣಿಗಳ । ಜನ್ಮಕೂ ಬಿಡೆನು
ನಿಜವು ॥ ೩ ॥

ಕಾಂಬೋಧಿ – ಝಂಪೆ

ಸಾಕಯ್ಯ ಯಮಧರ್ಮ। ಕಾಕು ಪಂಥವು ಸುಮ್ಮಗೇಕೆ ಸೋಲುವೆ ಯುವಳ ಮುಖದಿ ॥ ಸಾಕುವಳು ಪತಿಧರ್ಮ । ವಾಕೆಯುವಳೆರೆಯುನನು। ಸೋಕಗೊಡಳಿಲ್ಲಿಗಿದು ಸಿದ್ಧ ॥ ೧ ॥

ಕೇತಾರ ಗೌಳ – ಝಂಪೆ

ನೀನೆಂಬ ಮಾತಿನರ್ಥ । ಪಾಗದಿದು । ಜ್ಞಾನಿ ನೀನಾಗಿ ವ್ಯರ್ಥ ॥ ಮಾನಿನಿಯೊಳಾನು ಸೋಲ್ವೆ । ಎಂದೆನಲಿ । ಕಾನೆಂತು ಇದನು ಕೇಳ್ವೆ ॥೧॥

ಕಾಂಬೋಧಿ – ಝಂಪೆ

ಪಾತಿವೃತ್ಯದ ಮಹಿಮೆ । ನೀ ತಿಳಿಯದೆನ್ನೊಳೀ । ರೀತಿಯಲಿ ಪೇಳುತಿಹೆಯೆನುತ ॥ ಪ್ರೇತಪತಿ ಕೇಳ್ನಿನ್ನ । ಮಾತಿನಿಂದರಿಯುತಿದೆ। ನೀತಿಯಲ್ಲಿದು ಸಾರಿ ಪೇಳ್ವೆ ॥ ೧ ॥

ಕೇತಾರ ಗೌಳ – ಝಂಪೆ

ಪಾತಿವೃತ್ಯದ ಸತಿಗಳ । ಪತಿಗಳನು । ಧಾತ್ರಿಯಿಂ ತಂದೆ ಬಹಳ ॥ ಏತೆರನ ಗೈದರೆನಗೆ । ತಿಳಿಯುತೀ । ರೀತಿ ಪೇಳುವೆ ಸುಮ್ಮಗೆ ॥ ೧ ॥

ಕಾಂಬೋಧಿ – ಝಂಪೆ

ಎಲ್ಲ ಸತಿಯರ ತೆರನಿ । ದಲ್ಲ ಸಾವಿತ್ರಿಯದು । ಪುಲ್ಲಾಕ್ಷಿ ಜನಿಸಿಹಳು ವನದಿ ॥ ನಲ್ಲೆತೋರ್ಪಿ ಜಗದೋಳೆಲ್ಲ ಸತಿ ಧರ್ಮವನು । ಸುಲ್ಲಲಿತವಾಗಿ ಬೋಧಿಸಲು ॥ ೧ ॥

ಕೇತಾರ ಗೌಳ – ಝಂಪೆ

ಯಾರಾದರೇನು ಎನಗೆ । ಬಿಡೆನಯ್ಯ । ಧಾರುಣಿಯೊಳುದಿಸಿದವಗೆ ಸಾರಸಾಕ್ಷನ ನೇಮವು । ಆಯುಷ್ಯ । ತೀರಿದವರನು ತರುವೆವು ॥ ೧ ॥

ಕಾಂಬೋಧಿ – ಝಂಪೆ

ಆಗಲದಕೇನಂತೆ । ನಾಗಶಯನನ ನೇಮ । ಹಾಗಿರಲು ನಡೆಸಯ್ಯ

ನೀನು ॥ ನಾಗವೇಣಿಯೊಳ್ಪಂಥ । ನಾಗವಿದು ನೀ ಸುಮ್ಮ । ಗಾಗಿ ಸೋಲಲು ಬೇಡವೆಂದೆ ॥ ೧ ॥

ಭಾಮಿನಿ

ಸುರ ಮುನಿಪ ಕೇಳಿನ್ನ ವಾತನು । ತರುಣಿಯೊಳು ನಾ ಸೋಲ್ವೆನೆಂಬುವ । ಪರಿಕಿಸಲು ಬೇಕೆನಗೆ ಬಿಡೆನಾ ಸತ್ಯವಾನನನು ॥ ತರುವೆ ನಿಶ್ಚಯವೆನುತ ನಗುತಲಿ । ತರುಣಿಯುರ ಹದಿಬದೆಯ ಸತ್ವವ । ನರಿವೆ ಹೋಗೆಂದೆನುತ ನಡೆದನು ಹರಿಯ ಕೀರ್ತಿಸುತ ॥ ೧ ॥

ಕಂದ ಪದ್ಯ

ಸುರ ಮುನಿಪತಿ ತಾ ತೆರಳಲ್ । ಕಳುಹಿದ ತನ್ನಯ ಚರರನು ಕರೆವೃತಲಾಗಂ ॥ ಧರೆಗೈದುತ ಚಿತ್ರಾಶ್ವನ । ಹರಣವ ನೀವ್ತಹುದೀಗಳು ಎಂದೆನಲವರುಂ ॥ ೧ ॥

ಮುಖ್ಯವಾವತಿ - ತ್ರಿವುಡೆ

ಘೋರೆಯನುಜ್ಞೆಯುಗೊಂಡು ಚಾರರು । ಧರೆಗೆ ಬರುತಿರಲಿತ್ತ ವನದಲಿ । ತರು ಸಮಿಧೆ ತರಲೆಂದು ಪೊರಟನು । ತರಳ ನಿತ್ಯದ ಪರಿಯೊಳು । ಸತ್ಯವಾನ ॥ ೧ ॥ ಸುರಮುನಿಪನೆಂದವಧಿಯಾದಿನ । ವಿವುವೃದೆನ್ನುತ ತಿಳಿದು ಬಂದಾ । ಗೆರೆಯನಿಂಗರುಹಿದಳು ನಮಿಸುತ । ತರುಣಿ ಮಣಿ ಸಾವಿತ್ರಿಯು । ವಿನಯದಿಂದ ॥ ೨ ॥ ಬಂದು ವತ್ಸರವೊಂದು ಇಂದಿಗೆ । ಸಂದಿತಿದು ವರಿಗಾಗಿ ನಿಮ್ಮಯ । ಹಿಂದೆ ಬಂದವಳಲ್ಲ ಕಾಡಲಿ । ಬಂದಪೆನು ನಾನೀದಿನ । ನಿಮ್ಮ ಜತೆಗೆ ॥ ೩ ॥

ಸುರಚಿ - ಏಕ

ಬೇಡ ಬೇಡ ತರುಣಿ । ಎನ್ನನು । ಕಾಡಬೇಡ ಸುಗುಣಿ ॥ ಕಾಡಿಗೆ ಎನ್ನೊಡ । ಗೂಡಿ ಬರುವೆನೆಂದಾಡುವೆ ಏನನು । ನೋಡುವೆಯಲ್ಲಿ ॥ ಬೇ ॥ ೧ ॥ ಬರುವೆನು ಬೇಗದಲಿ । ತರುಗಳ । ತರುವೆನು ವಿಹಿಲದಲಿ ॥ ತರುಣಿಯೆ ಕಾಡಲಿ । ಚರಿಸಲು ನಿನ್ನಿಂ । ಹರಿಯದು ಸುಮ್ಮನೆ । ಇರು ನೀನಿಲ್ಲಿಯೆ ॥ ೨ ॥ ಎಂದೆನೆ ಕೇಳುತಲಿ । ಪತಿಯೊಡ । ನೆಂದಳು ಮುಗುಡ

ದಲಿ । ಸುಂದರ ನಿನ್ನೊಡ । ನೆಂದಾದರು ನಾ । ಬಂದಪೆನೆನ್ನುತ । ಲೆಂದಿಹುದುಂಟೆ ॥ ೩ ॥ ಬರುವೆನು ಕಾಡೊಳಗೆ । ಈ ದಿನ । ವಿರುವೆನು ಜತೆಯೊಳಗೆ ॥ ಕರುಣ ನಿಧಿಯೆ ಎ । ನ್ನರಿಕೆಯಿ:ದೊಂದನು । ನೆರವೇರಿಸು ಎಂ । ದೆರಗುವೆ ಚರಣಕೆ ॥ ೪ ॥

ವಾರ್ಧಿಕ್ಯ

ಛಲವಿಡಿದು ಬರುವೆನೆಂಬಬಲೆಯಂ ಚಿತ್ರಾಶ್ವ । ನೊಲಿದು ಜತೆಯಿಂದ ಕರಕೊಂಡಾಗ ಕಾಡ ಸಿರಿ । ಗಳನೆಲ್ಲ ತೋರಿಸುತ ಕಂಡೊಂದು ಮರನೇರಿ ಶಾಖೆಯಂ ಕೊಡಲಿಯಿಂದ ॥ ಬಲವಿಡಿದು ಕಡಿಯುತಿರೆ ಮೈಯೆಲ್ಲ ಬೆವರಿನಲಿ । ಸಲಿಲ ಮಯವಾಗಲ್ಕೆ ನಡುಗೆ ಕೈ ಕಾಲುಗಳು । ನಿಲಲಾರದಲ್ಲಿ ದೊಪ್ಪನೆ ಧರೆಗೆ ಬಿದ್ದನವನೇನೆಂಬೆನದ್ಭುತವನು ॥ ೧ ॥

ಭಾಮಿನಿ

ಧರೆಗೆ ಬಿದ್ದಸುತೊರೆವ ರಮಣನ । ಪರಿಯ ನೋಡುತ ತಲೆಯ ತೊಡೆಯೊಳ । ಗಿರಿಸುತಳಲಿದಳಖಿಳ ಕಲು ಮರಮರುಗುವಂದದಲಿ ॥ ಕರುಣನಿಧಿ ನೀನಾಗಿ ಭಕ್ತರ ಪೊರೆವೆ ಎಂಬಭಿಧಾನವನು ನೀ । ಮರೆತೆಯಾ ಹೇ ಜನನಿ ಕರುಣವ ತೊರೆದೆಯಾ ಮಾತೆ ॥ ೧ ॥

ಪುನ್ನಾಗ - ಏಕ

ದೇವಿ ನೀ ಗತಿಯೆನುತ । ಮನದೊಳು ನಾ । ಭಾವಿಸಿರಲು ನಿರತ ॥ ಪಾವನಾತ್ಮಕಿ ವಟ । ಸಾವಿತ್ರಿಯಿಂದೇಕೆ । ಈ ವಿಧಿ ದೊರಕಿಸಿದೆ ॥ ದೇ ॥ ೧ ॥ ಶರಣ ವತ್ಸಲೆ ಎಂಬುದ । ಅಂದೆನಗಾ । ಸುರಮುನಿಪತಿ ಪೇಳಿದ ॥ ತೆರನಂತೆ ಪೂಜಿಸಿ । ಬರುತಿದ್ದೆ ಚರಣವ । ಕೊರತೆ ಏನ್ಮಾತೆನ್ನಲಿ ॥ ದೇ ॥ ೨ ॥ ಗತಿಯೇನು ಮುಂದೆ ತಾಯೆ । ಪ್ರಾಣೇಶನು । ಗತಿಸಿದ ಮೇಲೆ ಮಾಯೆ ॥ ಹತಭಾಗ್ಯಳಾದೆ ನಾ । ವ್ರತನಿಷ್ಠೆಗಳ ಮಾಡಿ । ನುತಿಸುವೆ ನಾರನಮ್ಮ ॥ ದೇ ॥ ೩ ॥

ಭಾಮಿನಿ

ಎಂದು ಸುಯ್ಲಿಡುತಡವಿ ಮಧ್ಯದಿ । ಬೆಂದು ಬೇಗುದಿಯಾಗಿ ಮರುಗುತ । ನೊಂದುಕೊಂಡಿಹ ತರುಣಿ ಬಳಿಗೈತಂದು ಯಮಭಟರು ॥

ನಿಂದು ನೋಡಿದರವಳ ಸುತ್ತಲು । ಗಿಂದು ವಗ್ನಿಯ ಕಾಣುತಲಿ ನಾವ್ ।
ಬೆಂದು ಪೋಗುವೆವೆನುತ ಭಯದಿಂದೋಡುತುಸುರಿದರು ॥ ೧ ॥

ಜಂಜೋಟಿ – ಅಷ್ಟ

ಯಮದೇವ ಕೇಳೆಮ್ಮ ನುಡಿಯ । ನಾವ್ಬಂದ । ಕ್ರಮವನೇನೆಂ ಬೆವು ಜೀಯ ॥ ಎಮಗೆ ನೀನೆಂದಿಹ । ಕೃಪದಿಂದಲಾ ಭೂ । ರಮಣ ಸುತನ ಪ್ರಾಣಾ । ಕ್ರಮಿಸಲು ತೀರದೆ ॥ ೧ ॥ ತರುಣಿಯು ತೊಡೆಯು ಮೇಲ್ಕಿರವ । ನಿರಿಸುತ್ತ । ಲೊರಗಿಹನೆಳೆಜಲಿ ಕಸುವ ॥ ಬರದದು ಹತ್ತಿರ । ಸರಿಯಲು ಬೆಂಕಿಯು । ತುರಿಸುತ್ತಿದೆಯದ । ನರುಹಲು ಬಂದೆವು ॥ ೨ ॥

ಮೋಹನ – ಝಂಪೆ

ಕೇಳುತಲಿ ಯಮ ದೇವ । ನಾಳುಗಳ ಮಾತನ್ನು । ತಾಳಿ ಖತಿ ಯನು ಕೋಣವೇರಿ ॥ ಕಾಲಪಾಶವ ಒಡಿದು । ಬಾಲೆ ಬಳಿಗೈತಂದು । ನೀಲ ಕುಂತಳೆಯು ನೋಡಿದನು ॥ ೧ ॥ ತನ್ನ ವಲ್ಲಭನ ಶಿರ । ವನ್ನು ತೊಡೆಯೊಳಗಿಟ್ಟು । ರಣ್ಯದೊಳ ಗೋರ್ವಳಾ ರಾತ್ರಿ ॥ ಕನ್ನೆ ಕುಳಿತಿರುವ ಪರಿ । ಯನ್ನು ನೋಡುತ ಪ್ರಾಣ । ವನ್ನೆಳೆಯೆ ಪಾಶವಿಕ್ಕಿದನು ॥ ೨ ॥ ನೋಡಿದಳು ಸುಕುಮಾರಿ । ಜೋಡಿಸುವ ಪಾಶವನು । ಕೂಡೆ ಯಮ ನೆಂದು ತಾ ತಿಳಿದು ॥ ಬೇಡಿದಳು ಪದಕೆರಗಿ । ನೀಡೆನ್ನ ರಮಣನನು । ಮಾಡು ಕರುಣವ ನಬಲೆಯಲ್ಲಿ ॥ ೩ ॥ ಎನುತ ನುತಿಸಲು ಯಮನು । ಮನದೊಳಾಲೋಚಿಸಿದ । ವನಿತೆ ನೋಡಿದಳೆಂತು ಎನ್ನ ॥ ಮನುಜರಿಗ ಸಾಧ್ಯವೆ । ನ್ನನು ನೋಡಲದರಿಂದ । ಮುನಿಪನೆಂದುದು ಸತ್ಯವಾಯ್ತೆ ॥ ೪ ॥ ಪರಿಕಿಸುವೆನೆಂದೆನುತ । ಲೊರೆದ ಸಾವಿತ್ರಿಯೊಳು । ತರುಣಿ ನೀನೇಕೆ ದುಃಖಿಸುವೆ ॥ ದೊರಕನಿನ್ನವ ನಿನಗೆ । ಧರೆಯ ಋಣ ತೀರಿತೆಂ । ದರಿತುಕೊಂಬುದು ಮನದಿ ಬರಿದೆ ॥ ೫ ॥ ಭ್ರಾಂತಿಗೊಳಗಾಗದಿರು । ಕಾಂತೆ ನಾನಿದ ಸಿರಿಯು । ಕಾಂತನಪ್ಪಣೆಯಂತೆ ಗೈವೆ ॥ ಎಂತು ನಿನ್ನಲಿ ದಯವ । ನಾಂತು ಕೊಡುವೆನು ಸತ್ಯ । ವಂತನಸುವನು ಹಿಂದಕಾನು ॥ ೬ ॥ ವಾರಿಜಾಸನ ಲಿಖಿತ । ತೀರಿತದರಿಂದಲಿ । ನ್ನಾರ ಸೇರಲು ಬೇಕು ನಿನ್ನ ॥ ನೀರನಸುವನು ಕೊಂಡು । ಸಾರುವೆನು ಶೈಮಿನಿಗೆ । ದೂರ ಸರಿ ಎಂದೆನಲು ಕೇಳಿ ॥ ೭ ॥

ಸಾಂಗತ್ಯ - ರೂಪಕ

ಎಂತು ಪೋಗುವೆನು ಕೃ । ತಾಂತನೆ ಮನೆಗೆ ನಾ । ಕಾಂತನ ಬಿಟ್ಟೊಬ್ಬಳಾಗಿ ॥ ಕಾಂತೆಯು ಸರ್ವಸ್ವ । ಕಾಂತನೆಂಬುದ ತಿಳಿ । ದಿಂತು ಪೇಳುವೆಯೇಕೆ ಎನಗೆ ॥ ೧ ॥ ಕಡು ಕಷ್ಟ ಸ್ಥಿತಿಯೊಳು । ಸುಡುತಿದೆ ಒಡಲು ಮುಂ । ದಡಿ ಇಡಲಾರೆ ನಾ ಧಿಟವು ॥ ಕೊಡು ಎನ್ನ ರಮಣನ । ನಡೆಯುವೆ ಮನೆಗೆ ನಾ । ನಿಡು ಕೃಪೆಯನ್ನನಾಥೆಯಲಿ ॥ ೨ ॥

ಭಾಮಿನಿ

ಕಾಂತೆಯುಳಲುವ ಪರಿಯನರಿತು ಕೃ । ತಾಂತನುಸುರಿದ ಬೇಡು ಕರುಣಿಪೆ । ಕಾಂತನನು ಹೊರತೊಂದು ವರವನೆನಲ್ಕೆ ಯೋಚಿಸುತ ॥ ದಂತಿಗವುನೆಯು ತನ್ನ ಮಾವನ । ಸ್ವಂತ ರಾಜ್ಯವು ಕಂಗಳನು ಸಹ । ಸಂತಸದಿ ಕೊಡು ಎನಲು ಕೊಟ್ಟೆನೆನುತ್ತ ತೆರಳಿದನು ॥ ೧ ॥

ಕೇತಾರಗೌಳ - ಅಷ್ಟ

ವರವಿತ್ತು ಪೋಗುವ । ಪರಿಯರಿತಾಗಲಾ । ತರುಣಿ ಹಿಂದೆಯೆ ನಡೆಯೆ ॥ ತಿರುಗಿ ನೋಡುತ ಪೇಳ್ದ । ಬರುವೆ ಏಕೆಲೆ ನಾರಿ । ಬರಿದೆ ನೀನೆನ್ನೊಡನೆ ॥ ೧ ॥

ಸಾಂಗತ್ಯ - ರೂಪಕ

ಪ್ರಾಣಪೊಡೆಯನನ್ನು । ನೀನೊಯ್ದ ಬಳಿಕೇಕೆ । ಕ್ಷೋಣಿಯೊಳಾನು ಬಾಳುವುದು ॥ ಪ್ರಾಣೇಶನಿದ್ದೆಡೆ । ನಾನು ಬರುವೆನೆಂದು । ಆ ನೀರೆ ಪೇಳಲು ಕೇಳಿ ॥ ೧ ॥

ಮೋಹನ - ಝಂಪೆ

ಬೇಡ ಛಲವೆನ್ನೊಡನೆ । ನೀಡೆ ಪತಿಯನು ಸುಮ್ಮ । ನಾಡಬೇಡ ದರ ನೀನೊಂದು ॥ ಬೇಡು ವರವನು ಬೇರೆ । ನೀಡಿದಪೆನೆಂದೆನಲು । ಬೇಡಿದಳು ಪಿತಗೆ ಮಕ್ಕಳನು ॥ ೧ ॥ ನಾರಿ ನಿನ್ನಯ ಪಿತಗೆ । ನೂರು ಮಕ್ಕಳು ಪುಟ್ಟು । ವಾರೀತಿ ಹರಸಿರುವೆನೆನುತ ॥ ಹಾರಿಸುತ ಮಹಿಷ ನನು । ದೂರ ನಡೆಯುತ ತಿರುಗೆ । ವಾರಿಜಾಂಬಕಿಬಹುದ ನೋಡಿ ॥ ೨ ॥

ಮಾರವಿ - ಏಕ

ನೀತಿಯುಃ ಸತಿ ನೀ । ನೀತೆರ ಬರುವುದ । ದೇತಕೆ ಎನ್ನೊಡನೆ ॥ ಪ್ರೀತನ ಹಂಗನು । ನೀ ತೊರೆದೀಗಲೆ । ಧಾತ್ರಿಗೆ ತೆರಳುವುದು ॥ ೧ ॥

ಸಾಂಗತ್ಯ - ರೂಪಕ

ಏತಕೆನ್ನೊಳು ಸಿಟ್ಟು । ಪ್ರೀತ ಪತಿಯೆ ಎನ್ನ । ನಾಥನ ಬಿಟ್ಟಾನು ಪೋಗೆ ॥ ಧಾತ್ರಿಯೊಳೀಪೋರೆ । ನಾ ತೋರಲೆಂತಯ್ಯ । ನೀತಿಯುತನೆ ಯೋಚಿಸುವುದು ॥ ೧ ॥ ಅತ್ತೆ ಮಾವಂದಿರು ॥ ಎತ್ತ ಪೋದನುಃ ನಮ್ಮ । ಪುತ್ರನೆಂದೆನುತ ಕೇಳಿದರೆ ॥ ಉತ್ತರನೇನೀವೆ । ಮೃತ್ಯುವಾದಳು ಎಂದು । ಪೃಥ್ವಿಯಃ ಜನರಾಡದಿಹರೆ ॥ ೨ ॥

ಮಾರವಿ - ಏಕ

ಕೊಟ್ಟಿಹೆ ವರವೇರ । ಡಷ್ಟಾದರು ನೀ । ನೊಟ್ಟಿಗೆ ಬರುತಿರುವೆ ॥ ದಿಟ್ಟೆಯೆ ಬೇಡಿಕೊ । ಕೊಟ್ಟಪೆ ನಿನ್ನೊಂ । ದಿಷ್ಟದವರವೆನಲು ॥ ೧ ॥

ಸಾಂಗತ್ಯ - ರೂಪಕ

ವನಿತೆ ಯೋಚಿಸುತಶೈ । ಮುನಿ ನಾಥಗೆಂದಳು । ತನಯರೆನ್ನಯ ಬಸುರೊಳಗೆ ॥ ಜನಿಸುವಂತ ಭಯುವ । ನೆನಗೀಯಃ ಬೇಕೆನ । ಲಿನಸೂನು ವಿಂತೆಂದನಾಗ ॥ ೧ ॥

ಮಾರವಿ - ಏಕ

ನಾರಿಯೆ ಕೇಳ್ಸಕು । ಮೂರರು ನಿನ್ನೊಳು । ನೂರ್ವುಂದಿಗಳಹರು ॥ ಸಾರಿನ್ನಾದರು । ಧಾರುಣಿಗೆನುತಲೆ । ಹಾರಿಸೆ ಕೋಣನನು ॥ ೧ ॥ ಸೇರುತ ಪುರವನು । ದ್ವಾರದೊಳೀಕ್ಷಿಸೆ । ನಾರಿಯು ಬರುತಿರಲು ॥ ಮಾರಾರಿಯು ತೆರ । ಕಾರುತ ಕೆಂಡವ । ನಾರವಿ ನಂದನನು ॥ ೨ ॥ ತಿರುಗುತ ಪೋಗೆಂ । ದೊರೆದರೆ ಕೇಳದೆ । ಬರುತಿಹೆ ಗರ್ವದಲಿ ॥ ತರುಣಿಯೆನುತ ನಾ । ನಿರೆ ಸುಮ್ಮನೆ ನೀ । ಶಿರಕಡರುವೆಯಲ್ಲೆ ॥ ೩ ॥ ಬೇಡಿದ ವರಗಳ । ನೀಡಿಹೆ ನೆಲ್ಲವ । ಜೋಡಿಗನನು ಹೊರತು । ಗಾಡೀಗಾತಿಯೆ । ಕಾಡಲು ಬಂದರೆ । ದೂಡಿಪೆ ಚರರಿಂದ ॥ ೪ ॥

ಭಾಮಿನಿ

ಎಂದು ಕೋಪದಿ ನುಡಿಯೆ ಕೇಳುತ । ಲೆಂದಳೀನ್ನೈ ಪ್ರೀತ ಪತಿ ನೀ । ನೆಂದ ನುಡಿ ಸರಿಯೇ ವಿಚಾರಿಸು ಪತಿಯು ಹೊರತೆನಗೆ ॥ ಕಂದರ ಪ್ಪರದೆಂತು ಯೋಚಿಸ । ದೆಂದೆ ನೀ ನೀ ಪರಿಯೊಳೆನೆಸುರ । ವೃಂದ ವಂದಿತ ಮುನಿಪನಿದಿರಿಗೆ ಬಂದ ನಸುನಗುತ ॥ ೧ ॥

ಮಧುಮಾಧವಿ - ಏಕ

ಏನಯ್ಯ ಯಮಧರ್ಮ ಮನದಿ ಯೋಚನೆಯು । ಏನಾಯ್ತು ನಿನಗೆಂದು ಪೇಳು ಸಂಗತಿಯು ॥ ಪ ॥ ನಾರಿಯು ನೋಡುತ್ತ ನಿಂತಿಹೆ ಏಕೆ । ದಾರಿಯು ಕಾಣದೆ ಮುಂದೆ ಹೋಗಲಿಕೆ ॥ ನೀರೆಯು ಸಾಮಾನ್ಯ ಳಲ್ಲೆಂದು ಪೇಳೆ । ಹಾರಿದೆ ಹರಿಯಾಜ್ಞೆಯುಂಟೆಂದೆನುತಲಿ ॥ ಏ ॥ ೧ ॥ ನೀನೆ ವರವನಿತ್ತೆ ಸುತರಪ್ಪರೆಂದು । ನೀನೆ ಕೊಂಡೊಯ್ಯುವೆ ಪತಿ ಪ್ರಾಣ ವಿಂದು ॥ ಏನ ಯೋಚಿಸಿ ವರವಿತ್ತೆ ಹೇಳಯ್ಯ । ಪ್ರಾಣೇಶನನು ಬಿಟ್ಟು ಸುತರಪ್ಪ ಬಗೆಯು ॥ ಏ ॥ ೨ ॥ ಸತಿಯು ಪತೀತ್ವವ ಬಿಡುವವಳಲ್ಲ । ಪತಿಯು ಬಿಟ್ಟನ್ಯರ ನೋಡುವಳಲ್ಲ ॥ ಗತಿಯೇನು ನೀ ಕೊಟ್ಟ ವರಕಿನ್ನು ಮುಂದೆ । ಸತಿಯೊಳು ಸೋತೆಯು ಕೇಳಲು ಬಂದೆ ॥ ೩ ॥

ಭಾಮಿನಿ

ನಾರದನ ನುಡಿ ಕೇಳುತಂತಕ । ಭೂರಿ ಲಜ್ಜಿತನಾಗಿಮನದಲಿ । ಸಾರಸಾಕ್ಷಿಯ ಮೊಗವ ನೋಡುತ ಬೆರಗುವಟ್ಟಿರಲು ॥ ಗಾರುಗೆಟ್ಟಿಹ ಶರಣ ಜನರು । ದ್ಧಾರಿಯೆನಿಸುವ ಬಿರುದಿನಿಂ ನ್ಯೈ । ದೋರಿದಳು ಸಾವಿತ್ರಿ ದೇವಿಯು ಅಭಯ ಹಸ್ತದಲಿ ॥ ೧ ॥

ಸಾಂಗತ್ಯ - ರೂಪಕ

ಮುಕ್ತಿದಾಯಕಿ ಸರ್ವ । ಭಕ್ತರುದ್ಧಾರೆಯು । ಮುಕ್ತ ಕಂಠದಿ ನುತಿಸುತಲಿ ॥ ಶಕ್ತಿ ಸ್ವರೂಪೆಗೆ । ಭಕ್ತಿಯಿಂದೆರಗಲು । ವ್ಯಕ್ತರಾದರ ನೆತ್ತಿಯಮಗೆ ॥ ೧ ॥ ದಾರಿ ತಪ್ಪಿದೆ ನೀನು । ನಾರಿಗೆ ವರವಿತ್ತು । ನೀರ ನನಿಸ್ಸೀಯದಿರಲು ॥ ಜಾರತ್ವದೊಳು ಸುಖ । ಮಾರರ ಪಡೆವಳೆ । ನೀರೆ ಪತಿವ್ರತೆ ಸತಿಯು ॥ ೨ ॥ ವರವಿತ್ತ ಮೇಲಿನ್ನು । ವರನನ್ನು ಕೊಡದಿರ ।

ಲೊರೆದ ನುಡಿಯು ಪುಸಿಯಹುದು ॥ ಕೊರತೆ ಬಪ್ಪುದು ಮುಂದೆ । ಪರಿಹಾಸ್ಯಕೊಳಗಾಗ । ದಿರುವೆಯು ಯೋಚಿಸಿ ನೋಡು ॥ ೩ ॥ ಬೇಡ ಮನದಿ ಶಂಕೆ । ನೀಡವಳಿರೆಯನ । ಕೂಡಿ ಸುಖದೊಳಿರಲಿನ್ನು ॥ ಹೂಡಿ ಸಂಸಾರವ । ಜೋಡಾಗಿ ಧರೆಯೊಳ್ಕಾ । ಪಾಡಲಿ ಸತಿ ಧರ್ಮವನ್ನು ॥ ೪ ॥ ನೆರವೇರಲ್ನಿನ್ನಯ । ವರವೆಂದು ಸಂತೈಸಿ । ತರುಣಿಗೆಂದಳು ಪತಿ ಯೊಡನೆ । ಧರೆಗೆ ನೀ ತೆರಳುತ್ತ । ಲಿರುಸುಖದಿಂದೆಂದು । ಹರಸುತಂತ ರ್ಧಾನಳಾಗೆ ॥ ೫ ॥

ಸೌರಾಷ್ಟ್ರ – ತ್ರಿಪುಡೆ

ದೇವಿ ತೆರಳಲು ಬಳಿಕಲಾ ಯಮ । ದೇವ ಸಾವಿತ್ರಿಯೊಳು ಪೇಳಿದ । ನೀವೆ ನಿನ್ನಯ ಪತಿಯ ಪ್ರಾಣವ । ಭೂವಲಯಕೆ ॥ ೧ ॥ ಪೋಗು ನೀವಿದ್ದಿರುವ ವನದೆಡೆ । ಗಾಗಿ ಕಳುಹುವೆನಸುವನಲ್ಲಿಗೆ । ನೀಗು ಮನಸಿನ ಚಿಂತೆಗಳನೆಲೆ । ನಾಗವೇಣಿ ॥ ೨ ॥ ಇದುವರೆಗೆ ನರಮನುಜ ರಾರೀ । ತ್ರಿದಶನಗರಿಗೆ ನಿನ್ನ ತೆರದಲಿ । ಬದುಕಿ ಬಂದವರಿಲ್ಲ ಪೊಸತಿದು । ಸುದತಿ ಮಣಿಯೆ ॥ ೩ ॥ ಕೊಡುವೆ ನಿನಗೀ ದೇವಲೋಕದ । ಒಡವೆ ವಸನಗಳನ್ನು ಧರಿಸುತ । ನಡೆ ವಿಮಾನದಿ ನಿನ್ನ ಪತಿಯ । ದ್ದೆಡೆಗೆ ಬಾಲೆ ॥ ೪ ॥ ಎನುತ ವಿವಿಧಾಭರಣ ವಸನಗ । ಳನು ತರಿಸುತೀಯಲ್ಕೆ ಧರಿಸುತ । ಇನಜಗೊಂದಿಸೆ ಹರಸಿ ಬೀಳ್ಕೊಡೆ । ವನಜ ಮುಖಿಯು ॥ ೫ ॥ ನಾರದನ ಪದಯುಗಕೆ ಮಣಿಯಲು । ನಾರಿಯನು ಪಿಡಿದೆತ್ತಿ ನಿನ್ನಯ । ಕೋರಿಕೆಯು ಫಲಿಸಿದುದೆ ತೆರಳು ಮ । ಯೂರಯಾನೆ ॥ ೬ ॥ ಉಭಯ ಕುಲ ರಕ್ಷಿಸಿದೆ ಭಾಮಿನಿ । ಶುಭವ ಕಾಣುವೆ ಮುಂದಕೆಲ್ಲವ । ನಿಭಗ ಮನೆ ತೆರಳೆಂದು ಹರಸುತ । ನಭಕಡರಲು ॥ ೭ ॥

ವಾರ್ಧಿಕ್ಯ

ಸುರಮುನಿಪ ತೆರಳಲ್ಕೆ ತರುಣಿ ಪೊರಟಲ್ಲಿಂದ । ಬರುತ ಕಂಡಳು ವನದಿ ವರ ರಮಣನಿರವನ್ನು । ಇರುಳು ಕನವರಿಸುತೆಚ್ಚರಗೊಳುವ ತೆರದೊಳಾ ಧೊರೆಕುಮಾರಕನೇಳಲು ॥ ಹರಿಣಾಕ್ಷಿ ಕಂಡಾಗ ಹರುಷ ದಿಂದೈತಂದು । ಶಿರಚಾಚಿ ಪಾದದೊಳು ಕರುಣದಿಂದೆತ್ತಿ ಕು । ಳ್ಳಿರಿ ಸುತ್ತ ಪೇಳಿದನು ಸರಸದಿಂ ಮಡದಿಯೊಳು ಸ್ವಪ್ನ ವಾರ್ತೆಯನೆಲ್ಲವ ॥ ೧ ॥

ಪಂತುರಾವಳಿ – ಮಟ್ಟೆ

ತರುಣಿ ಮಣಿಯೆ ಕೇಳಿ ಕನಸ ಕಂಡೆನೊಂದನು । ಮರದಿಂ ಬಿದ್ದು ಬೇನೆಯಿಂದಲೊರಗೆ ತನುವನು ॥ ತೊರೆಸಿ ಪ್ರಾಣ ಕೊಂಡುಪೋಗೆ ಯಮನ ದೂತರು ॥ ಬರಲು ಕಾಣುತಗ್ನಿಯನ್ನು ಬೆದರಿ ಪೋದರು ॥೧॥ ಕ್ರೂರ ಪಾಶ ಹಿಡಿದು ಬಳಿಕಲೋರ್ವ ಕೋಣನ । ಏರಿ ಬಂದು ತನುವ ನೆಳೆದು ಕೊಂಡುಪೋಪನ ॥ ಸೇರಿ ಜತೆಯೆ ಹಿಂದೆ ನಡೆದು ವರವ ಪಡೆ ಯುತ । ನಾರಿ ನೀನು ಕಡೆಗೆ ಯಮನೊಳ್ ಸುತರ ಬೇಡುತ ॥ ೨ ॥ ವರವನಿತ್ತು ನಗರಿಗೈದಿ ತಿರುಗಿ ನೋಡಲು । ತರುಣಿ ನಿನ್ನ ಬರವ ಕಂಡು ಕುಪಿತನಾಗಲು॥ಸುರಮುನೀಂದ್ರ ಬಂದು ನಕ್ಕು ನುಡಿದನೆನ್ನುತ। ಕರುಣಿ ದೇವಿ ಬಂದು ಸಂತವಿಟ್ಟಳೆನ್ನುತ ॥ ೩ ॥ ಬಳಿಕಲಿನಜನೆನ್ನ ಜೀವ ಕೊಡಲಿಕೊಪ್ಪುತ । ನಳಿನ ಮುಖಿಯೆ ತೆರಳು ಎಂದು ನಿನ್ನ ಕಳುಹುತ। ಇಳೆಗೆ ಕಳುಹಿಸಲ್ಕೆ ಬಂದು ತನುವ ಸೇರ್ದೆನು । ಜಲಜನೇತ್ರೆ ಇನಿತು ನಡೆದ ಕನಸ ಕಂಡೆನು ॥ ೪ ॥

ಭಾಮಿನಿ

ಎಂದು ನುಡಿವೆಡೆಗಳಲಿ ನಾರಿಯು । ನೊಂದುಕೊಂಡವಳಂತೆ ಕಂಬನಿ । ಬಿಂದುಗಳು ಉದುರುತಿರೆ ಕಾಣುತ ಬಳಿಕ ಚಿತ್ರಾಶ್ವ ॥ ಮಂದ ಗಮನೆಯು ನೋಡುತ್ತೇನ್ಯಾ । ತೆಂದು ಕೇಳಲು ನಡೆದ ಚರಿತವ । ನಿಂದು ಮುಖಿ ಪೇಳಿಲ್ಕೆ ತೋಷಿಸುತಾಗಲಿಂತೆಂದ ॥ ೧ ॥

ವಾರ್ಧಿಕ್ಯ

ತರುಣಿ ನಿನ್ನಯ ಕರವ ಪಿಡಿದರಿಂದೀ ಭಾಗ್ಯ । ದೊರಕಿತಲ್ಲದೆ ಮೃತನ ಜೀವಿಸಿದರುಂಟೆ ಈ । ಧರಣಿಯೊಳಗೆಂದೆನುತ ತೆಗೆದಪ್ಪಿ ಮುದ್ದಿಸುತ ಕಳೆದು ರಾತ್ರಿಯನಲ್ಲಿಯೆ ॥ ತರಣಿಯುದಯದೊಳೆದ್ದು ಪೊರಟು ಬರಲಾಶ್ರಮಕೆ । ಕುರುಡರಾಜಗೆ ಕಂಗಳುದಿಸಿಹುದ ಮತ್ತಲ್ಲಿ । ಧೊರೆ ಯಶ್ವಪತಿ ಸಹಿತ । ಲಿರಲೆಲ್ಲರಿಗೆ ನಮಿಸಿ ನಡೆದುದೆಲ್ಲವ ಪೇಳಲು ॥

ತುಜಾವಂತು – ಝಂಪೆ

ನಡೆದ ಕಥನವ ಕೇಳಿ । ಪಡೆದ ತ್ಯಾತಂದೆಗಳು । ಪಡುತಿರಲು ಸಂತೋಷ ಮನದಿ ॥ ಖಡುಗ ಮಕುಟಗಳನ್ನು । ಹಿಡಿದಲ್ಲಿಗೈತಂದ ।